# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ನಹುಷ ಮೋಕ್ಷ

ಕವಿ

## ಶ್ರೀಧರ ಡಿ. ಎಸ್.

ಅಂತರಜಾಲ ಆವೃತ್ತಿ ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ನವೆಂಬರ್ ೩೦, ೨೦೧೯

ಯಕ್ಷವಾಹಿನಿ

Email: yakshaprasangakosha@gmail.com, yakshavahini@gmail.com Blog: www.yakshaprasangakosha.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರು ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

## ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



ಶ್ರೀಧರ ಡಿ.ಎಸ್ .
ಪ್ರಧಾನ ಸಂಪಾದಕರು



ಗಿಂಡೀಮನೆ ಮೃತ್ಯುಂಜಯ
ಸಹ ಸಂಪಾದಕರು



ರವಿ ಮಡೋಡಿ
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು

ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ

ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ

ರವಿ  ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಮಹಾಭಾರತ, ಭಾಗವತ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಗೊತ್ತಿಲ್ಲ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೧೯೩

**ಪಾತ್ರಗಳು:**

ಇಂದ್ರ, ಅಗ್ನಿ, ವರುಣ, ರುಧಿರಮುಖಿ, ರುದ್ರಾಕ್ಷ, ವೃತ್ರಾಸುರ, ದೇವದೂತ, ಮಹಾವಿಷ್ಣು, ದಧೀಚಿ, ಬೃಹಸ್ಪತಿ, ನಹುಷ, ಮಂತ್ರಿ, ದೇವಾಂಗನೆಯರು, ಶಚಿ, ಉಪಶ್ರುತಿ ದೇವಿ, ಸಪ್ತರ್ಷಿಗಳು – ಅಗಸ್ತ್ಯರು, ಅಜಗರ, ಧರ್ಮರಾಜ, ಭೀಮಸೇನ, ಬೇಟೆಗಾರರು

**ಕಥಾಸಾರಾಂಶ:**

ಇಂದ್ರನ ಓಲಗ - ಲೋಕ ಚಿಂತನೆ, ಕಾಲಕೇಯರಾದ ರುಧಿರಮುಖಿ, ರುದ್ರಾಕ್ಷರ ಪ್ರವೇಶ, ವೃತ್ರನ ಓಲಗ , ಕಾಲಕೇಯರೊಂದಿಗೆ ಸಖ್ಯ, ದೇವಲೋಕದ ಮೇಲೆ ದಾಳಿ, ದೇವಾಸುರ ಯುದ್ಧ, ದೇವತೆಗಳ ಪರಾಭವ , ವಿಷ್ಣುವಿನಿಂದ ದಧೀಚಿಯನ್ನು ಆಶ್ರಯಿಸುವ ಸೂಚನೆ (ಅಶರೀರ ವಾಣಿಯಿಂದ ಸಖ್ಯ ಸೂಚನೆ) ಮತ್ತೆ ದೇವತೆಗಳಿಂದ ದಾಳಿ. ವಿಹಾರ - ನೊರೆಯ ಮೂಲಕ ವೃತ್ರ ವಧೆ, ಇಂದ್ರನನ್ನು ಹತ್ಯೆ ಆಕ್ರಮಿಸುವುದು, ಇಂದ್ರ ಅದೃಶ್ಯನಾಗುವುದು, ದೇವತೆಗಳ ಚಿಂತೆ, ಬೃಹಸ್ಪತಿಯಿಂದ ನಹುಷನನ್ನು ಕರೆತರುವ ಸೂಚನೆ, ನಹುಷನ ಓಲಗ, ದೇವತೆಗಳ ಆಗಮನ, ನಹುಷನನ್ನು ಒಪ್ಪಿಸಿ ಇಂದ್ರಪೀಠದಲ್ಲಿ ಪಟ್ಟಬಂಧ, ದೇವಾಂಗನೆಯರ ನೃತ್ಯ, ನಹುಷನಿಗೆ ಮದವೇರುವುದು, ಶಚಿಯ ಚಿಂತೆ, ನಹುಷ ಶಚಿಯನ್ನು ಮೋಹಿಸುವುದು, ಶಚಿಯು ಬೃಹಸ್ಪತಿಯ ಸೂಚನೆಯಂತೆ ಉಪಶ್ರುತಿ ದೇವಿಯನ್ನು ಆರಾಧಿಸಿ ಇಂದ್ರನನ್ನು ಕಾಣುವುದು, ನಹುಷನ ಬಯಕೆಗುತ್ತರವಾಗಿ ಋಷಿಯಾನದಲ್ಲಿ ಬರುವಂತೆ ಸೂಚನೆ, ಅಗಸ್ತ್ಯ ಶಾಪ, ವಿಶಾಪ, ಅಜಗರನಾಗಿ ನಹುಷ, ಭೀಮಸೇನನ ಬೇಟೆ, ಅಜಗರ ಬಂಧ, ಧರ್ಮರಾಜ - ಅಜಗರ ಸಂವಾದ, ನಹುಷ ಮೋಕ್ಷ.

**ಕವಿ ಪರಿಚಯ :**

ನಿವೃತ್ತ ಕನ್ನಡ ಉಪನ್ಯಾಸಕ. ಸಾಹಿತಿ, ಯಕ್ಷಗಾನ ಅರ್ಥಧಾರಿ ಮತ್ತು ಪ್ರಸಂಗ ಕರ್ತೃ. ಯಕ್ಷಗಾನ ವಿಮರ್ಶಕ. ಊರು - ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕು, ನಿಟ್ಟೂರು ಬಳಿಯ ಧರೇಮನೆ. ಕಳೆದ ಮೂವತ್ತಾರು ವರ್ಷಗಳಿಂದ ನೆಲೆಸಿರುವುದು ಮಂಗಳೂರು ತಾಲೂಕಿನ ಕಿನ್ನಿಗೋಳಿಯಲ್ಲಿ. ವಿದ್ಯಾರ್ಥಿ ದೆಸೆಯಿಂದಲೇ ಯಕ್ಷಗಾನದಿಂದ ಆಕರ್ಷಿತ. ವೇಷಧಾರಿಯಾಗಿ, ಅರ್ಥಧಾರಿಯಾಗಿ ಪಳಗಲು ವಿದ್ಯಾಭ್ಯಾಸ ಮಾಡಿದ ಉಡುಪಿ ಸಹಕಾರಿಯಾಯಿತು.

ಉಡುಪಿ ಯಕ್ಷಗಾನ ಕೇಂದ್ರ ಯಕ್ಷಗಾನ ಪ್ರಸಂಗ ಮಾಲಿಕಾ ಎಂಬ ಶೀರ್ಷಿಕೆಯಲ್ಲಿ ೧೩ ಪ್ರಸಂಗಗಳನ್ನು ಒಂದೇ ಕೃತಿಯಲ್ಲಿ ಪ್ರಕಟಿಸಿದೆ. ಯಕ್ಷಗಾನದ ಸುಮಾರು ನೂರಾಮೂವತ್ತು ಮಟ್ಟುಗಳನ್ನು ವಿವಿಧ ಪ್ರಸಂಗಗಳಲ್ಲಿ ಬಳಸಿಕೊಳ್ಳಲಾಗಿದೆ. ಪ್ರಸಂಗ ರಚನೆ ಮಾತ್ರವಲ್ಲದೆ, ಯಕ್ಷಗಾನ ಕ್ಷೇತ್ರಕ್ಕೆ ಸಂಬಂಧಿಸಿದ ನೂರಾರು ವಿಮರ್ಶೆಗಳು, ಚಿಂತನೆಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ, ಗ್ರಂಥಗಳಲ್ಲಿ ಪ್ರಕಟಗೊಂಡಿವೆ. ಕಿನ್ನಿಗೋಳಿಯ `ಯಕ್ಷಲಹರಿ' ಯಕ್ಷಗಾನ ಸಂಸ್ಥೆಯಲ್ಲಿ ೨೪ ವರ್ಷ ಕಾರ್ಯದರ್ಶಿಯಾಗಿ ಸೇವೆ. ಹಲವು ತಾಳಮದ್ದಲೆ ಸ್ಪರ್ಧೆಗಳನ್ನು, ಸಪ್ತಾಹಗಳನ್ನು ಆಯೋಜಿಸಿದ್ದಾರೆ. ಜೊತೆಗೆ, ವಿವಿಧ ಸಂಘ ಸಂಸ್ಥೆಗಳು ಆಯೋಜಿಸಿರುವ ಆಟ-ಕೂಟಗಳಲ್ಲಿ ಅವಲೋಕನಕಾರರಾಗಿ ಮತ್ತು ಗೋಷ್ಠಿ, ಕಮ್ಮಟಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡ ಅನುಭವ. ಅರ್ಥಧಾರಿಯಾಗಿ ಸಾವಿರಾರು ಕೂಟಗಳಲ್ಲಿ ಭಾಗವಹಿಸುವಿಕೆ. ಎಲ್ಲ ಬಗೆಯ ಪಾತ್ರಗಳ ನಿರ್ವಹಣೆ. ಅವಧಾನಗಳಲ್ಲಿ ಪೃಚ್ಛಕರಾಗಿ, ಸಂಘ-ಸಂಸ್ಥೆಗಳ ಸಲಹೆಗಾರರಾಗಿ, ಶ್ರೀ ಗುರು ರಾಘವೇಂದ್ರ ಸಂಚಾರಿ ಯಕ್ಷಗಾನ ಮಂಡಳಿ ಹೊಸಬೆಟ್ಟು ಸುರತ್ಕಲ್ ಇದರ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಣೆ. ಸಾಹಿತ್ಯದ ಇತರ ಪ್ರಕಾರಗಳಲ್ಲೂ ಆಸಕ್ತಿ. ರಾಜಕೀಯ ವಿಶ್ಲೇಷಣೆ, ರಂಗ ವಿಮರ್ಶೆ, ಲಲಿತ ಪ್ರಬಂಧ, ನಗೆ ಲೇಖನಗಳನ್ನು ಬರೆಯುವುದೂ ಹವ್ಯಾಸ. ಹಾಸ್ಯ ಬರಹ ಕುರಿತ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಬಹುಮಾನವೂ ಬಂದಿದೆ. 'ಬಸ್ಸು ಜಟಕಾ ಬಂಡಿ' ಎಂಬ ನಗೆ ಲೇಖನಗಳ ಪುಸ್ತಕ ಪ್ರಕಟಗೊಂಡಿದೆ. ಶ್ರೀರಾಮಚಂದ್ರಾಪುರ ಮಠದಿಂದ ಪ್ರಕಟಗೊಂಡ ಗುರುಗ್ರಂಥಮಾಲಿಕೆಯಲ್ಲಿ ಶುಕ್ರಾಚಾರ್ಯ, ದ್ರೋಣಾಚಾರ್ಯ, ಮಹಾಮುನಿ ಶುಕ ಎಂಬ ಮೂರು ಕೃತಿಗಳು ಪ್ರಕಟವಾಗಿವೆ. ಮಂಗಳೂರು ವಿಶ್ವವಿದ್ಯಾನಿಲಯದ ದ್ವಿತೀಯ ಬಿ. ಕಾಂ ಪದವಿ ಕನ್ನಡ ಪಠ್ಯಪುಸ್ತಕದಲ್ಲಿ 'ಮಹಾಪ್ರಸ್ಥಾನ' ಪ್ರಸಂಗದ ಪಾಂಡವ ಸ್ವರ್ಗಾರೋಹಣದ ಒಂದು ಭಾಗ ಪಠ್ಯವಾಗಿದೆ.

ಯಕ್ಷಗಾನ ಪತ್ರಿಕೆ 'ಕಣಿಪುರ'ದಲ್ಲಿ ರಂಗಸ್ಥಳದ ಅಭಿಜಾತ ಕವಿಗಳು ಎಂಬ ಅಂಕಣವನ್ನು ಬರೆಯುತ್ತಿದ್ದು, ಇದರಲ್ಲಿ ಯಕ್ಷಗಾನ ಸುಪ್ರಸಿದ್ಧ ಕವಿಗಳ ಪರಿಚಯ ನೀಡಲಾಗುತ್ತಿದೆ. ಬೆಂಗಳೂರಿನ `ಸುದಿನ ಸುರಭಿ' ಪತ್ರಿಕೆಯಲ್ಲಿ 'ಪುರಾಣ ಸ್ವಾರಸ್ಯಗಳು' ಎಂಬ ಅಂಕಣ ಬರಹ ಪ್ರಕಟಗೊಂಡಿದೆ. ಶ್ರೀ ರಾಮಚಂದ್ರಾಪುರ ಮಠದ 'ಧರ್ಮಭಾರತೀ' ಮಾಸಪತ್ರಿಕೆಯಲ್ಲಿ 'ವೀರತಪಸ್ವಿ' ಧಾರಾವಾಹಿಯಾಗಿ ಪ್ರಕಟವಾಗುತ್ತಿದೆ.

ಉಡುಪಿಯ ಯಕ್ಷಗಾನ ಕಲಾರಂಗ ಸಂಸ್ಥೆ ೨೦೧೫ನೇ ಸಾಲಿನ 'ತಲ್ಲೂರು ಕನಕ ಅಣ್ಣಯ್ಯ' ಪ್ರಶಸ್ತಿ ನೀಡಿ ಗೌರವಿಸಿದೆ. ಜೊತೆಗೆ ಅವರ ಪ್ರಸಂಗಗಳ ಕುರಿತ ಸಾಹಿತ್ಯ-ಸಾಧನಾವಲೋಕನ, ಅವರ ಯಕ್ಷಗಾನ ಪ್ರಸಂಗಗಳ ವಸ್ತುವಿನ್ಯಾಸ-ಆಶಯ, ಛಂದಸ್ಸಿನ ಬಳಕೆ ಕುರಿತಾಗಿ ಯಕ್ಷ

ವಿದ್ವತ್ ಲೋಕ ಭಾಷಣ-ಚರ್ಚೆಗಳನ್ನು ದಿನವಿಡೀ ನಡೆಸಿದ್ದು ಗಮನಾರ್ಹ. ಯಕ್ಷಗಾನ ಬಯಲಾಟ ಅಕಾಡೆಮಿ ಶ್ರೀಧರರ 'ಯಕ್ಷಗಾನ ಪ್ರಸಂಗ ಮಾಲಿಕಾ' ಕೃತಿಗೆ ೨೦೧೧ನೇ ಸಾಲಿನ ಪುಸ್ತಕ ಪ್ರಶಸ್ತಿ ನೀಡಿ ಗೌರವಿಸಿದೆ. ಶಿವಮೊಗ್ಗದಲ್ಲಿ ೨೦೧೬ರ ಜನವರಿಯಲ್ಲಿ ನಡೆದ ಅಖಿಲ ಭಾರತ ೧೧ನೇ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ೨೦೧೬ರ ಫೆಬ್ರುವರಿ ತಿಂಗಳಲ್ಲಿ ಕೆರೆಮನೆಯಲ್ಲಿ ನಡೆದ 'ಶಂಭುಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ' ಕಾರ್ಯಕ್ರಮದಲ್ಲಿ ಸನ್ಮಾನಿಸಲ್ಪಟ್ಟಿದ್ದಾರೆ. 'ಜಡಭರತ' ಪೌರಾಣಿಕ ಕಾದಂಬರಿ ಪ್ರಕಟಗೊಂಡಿದ್ದು, 'ಅಸುರ ಗುರು' ಎಂಬ ಬೃಹತ್ ಕಾದಂಬರಿ ಪ್ರಕಟಣೆಗೆ ಸಿದ್ಧವಾಗಿದೆ.

ಇವರು ಬರೆದ ಪ್ರಸಂಗಗಳು: ಕಬಂಧ ಮೋಕ್ಷ, ಸುದ್ಯುಮ್ನ, ಆದಿನಾರಾಯಣ ದರ್ಶನ, ಕುವಲಯಾಶ್ವ, ಗರುಡ ಪ್ರತಾಪ, ಬಾಲಭಾರತ, ಸತ್ವಶೈಥಿಲ್ಯ, ಮಹಾಪ್ರಸ್ಥಾನ, ಪರೀಕ್ಷಿತ-ಆಸ್ತೀಕಜನ್ಮ, ಜನಮೇಜಯ, ಶುಕ್ರಸಂಜೀವಿನೀ, ಅಗಸ್ತ್ಯ, ಜಡಭರತ, ಸಮ್ರಾಟ್ ಮರುತ್ತ, ಕುಜ್ರುಂಭ ಕಂದರ, ಯಕ್ಷಪ್ರಶ್ನೆ, ಯೋಗಾವತಾರಂ, ಫಲ್ಗುಣೀ ತೀರ್ಥ ಮಹಿಮೆ, ವೀರ ಚಿತ್ರಧ್ವಜ, ಶ್ರೀರಂಗ ರಾಯಭಾರ, ನಾಲಾಯನೀ, ಬಕನ ಬಂಡಿ, ಅಂಗಾರಪರ್ಣ ವೃತ್ತಾಂತ, ಧೌಮ್ಯಪರಿಗ್ರಹ, ದ್ರೌಪದೀ ಸ್ವಯಂವರ, ದುರ್ಗಮಾಸುರ ವಧೆ, ಶರವೂರ ಶ್ರೀದುರ್ಗೆ, ಪೃಥುಯಜ್ಞ, ಹನ್ನಾರ ರಾಮೇಶ್ವರ ಮಹಾತ್ಮೆ, ನೈಮಿಷಾರಣ್ಯ ನಿರ್ಮಾಣ, ಸ್ವರ್ಣಕಮಲ, ನಹುಷ ಮೋಕ್ಷ

**ಟಿಪ್ಪಣಿ** :

# ಪ್ರಸಂಗ ಸಾಹಿತ್ಯ

**ಭಾಮಿನಿ**
ಲೋಕವಂದ್ಯರಿಗೆರಗಿ ಗುರುಗಳ |
ನೇಕ ಚಿತ್ತದಿ ಸ್ಮರಿಸಿ ಕವಿ ವಾ |
ಲ್ಮೀಕಿ ವ್ಯಾಸರ ನೆನೆದು ಪೂರ್ವ ಕವೀಶ್ವರರ ನುತಿಸಿ ||
ನಾಕುಮೊಗನರಸಿಯನು ಬೇಡುವೆ |
ನೀ ಕುಳಿತು ಮತಿಯಲ್ಲಿ ನಡೆಸೆ |
ನ್ನೀ ಕೃತಿಯನೆಂದೊಪ್ಪಿಸುತ ತೊಡಗುವೆನು ಲಾಲಿಪುದು || 1 ||
ಸಹಜ ಸಾಹಸ ಮೀರುತೇರುವ |
ವಿಹಗವಾದರು ಪತನಗೊಳ್ಳುಗು |
ಮಹತಿಯವನತಿ ಹೇತುವತ್ಯುನ್ನತಿಯ ಸತ್ಯವನು ||
ಸಹನೆ ಸುಮನಸ ಹಿತವೆನಿಪ್ಪುದ |
ನಿಹಪರಕೆ ಸರ್ವತ್ರ ಸಾರುವ |
ನಹುಷ ಮೋಕ್ಷದ ಕಥೆಯನೊರೆವೆನು ಯಕ್ಷಕಾವ್ಯದಲಿ || 2 ||

**ತುಜಾವಂತು - ಝಂಪೆ**
ಸುತ್ರಾಮನೊಪ್ಪಿದ ಸುಧರ್ಮದಲಿ ದಿಕ್ಪಾಲ |
ವೃತ್ತದೊಡಗೂಡುತ್ತ ವೈಭವಂ ಮಿಗಲು ||
ಮಿತ್ರಸುತ ಹುತವಹಂ ವರುಣ ವಾಯು ಕುಬೇರ |
ಮರ್ತ್ಯವಾಹನ ಸಹಿತಲಿತ್ತನೋಲಗವ || 3 ||
ಕೇಳಿ ಸುಮನಸರೆಲ್ಲ ಪಾಲಕರು ನಮಗೆಲ್ಲ |
ಮೂಲ ಮೂರ್ತಿಗಳೆಮ್ಮ ನೇಮಿಸಿಹರೆಲ್ಲ ||
ಗಾಳಿ ಜಲವಗ್ನಿ ಧನ ಧರ್ಮೇಂದ್ರಿಯಂಗಳ |
ನ್ನಾಳುವಧಿಕಾರವೀಕಾಲಕಿತ್ತಿಹರು || 4 ||
ಕಾಲಕೇಯರೆನಿಪ್ಪ ಖಳ ದೈತ್ಯರು ಸ್ವರ್ಗ |
ವಾಳುವೆವು ನಾವೆಂದು ದಾಳಿಗೈದಿರಲು ||
ಸೀಳಿದೆವು ಮುನಿಯಗಸ್ತ್ಯಾನುಗ್ರಹವ ಪೊಂದಿ |
ಕಾಲ ನಿಷ್ಕಂಟಕವು ಮೇಲೇನು ಪೇಳಿ || 5 ||

**ಕೇದಾರಗೌಳ - ಝಂಪೆ**
ಅವಧರಿಸು ದಿವಪಾಲಕ | ದೈತ್ಯರಿಂ |
ದವಘಡವು ನಿಷ್ಕಂಟಕ ||
ಭುವನ ಮೂರರೊಳು ಶಾಂತಿ | ಋಷಿಕುಲದ |
ಹವನದಿಂದೆಮಗುನ್ನತಿ || 6 ||

**ಮಾರವಿ - ಏಕ**
ಚಲನೆಯೊಳೆಲ್ಲವನರಿತಿಹೆ ನಾ ಮೂ |
ರಿಳೆಯೊಳು ನೆಮ್ಮದಿಯು ||
ನೆಲೆಸಿದೆ ದುರ್ಘಟವಿರದಾವೆಡೆ ನಿ |
ಷ್ಕಲುಷಿತ ಧಾರಿಣಿಯು || 7 ||
ಜಲಮಯವಾಗಿರೆ ಜಗವೆಲ್ಲವು ಶ್ಯಾ |
ಮಲೆಯಾದಳು ಪ್ರಕೃತಿ ||
ಪುಲಕಿತ ಸೊಗದಿಂದಿಳೆ ತಂಪಾಗಿದೆ |
ನೆಲಕಿಲ್ಲವು ವಿಕೃತಿ || 8 ||

**ಸೌರಾಷ್ಟ್ರ - ತ್ರಿವುಡೆ**
ಮೆಚ್ಚಿದೆನು ನೀವೆಂದ ಮಾತಿಗೆ |
ಎಚ್ಚರದೊಳಿರಬೇಕು ದೈತ್ಯರು |
ಹೆಚ್ಚಿಕೊಂಡರೆ ಕಷ್ಟ ಕೆಡಿಪರು | ಸಚ್ಚರಿತೆಯ || 9 ||

**ವಾರ್ಧಕ**
ಅರವತ್ತು ಸಾಸಿರದ ಸಂಖ್ಯೆಯೊಳ್ ಕಾಲಿಕೆಯ |
ತರಳರಾದರು ಮಹಾ ಮುನಿ ಕಶ್ಯಪಾಖ್ಯಂಗೆ |
ಕರೆಯಿತವರನು ಲೋಕ ಕಾಲಕೇಯರ್ ಬಳಿಕ ವಿರಚಿಸಿ ಹಿರಣ್ಯ ಪುರವ ||
ದುರುಳರತಿ ಕಂಟಕರ್ ಸ್ವರ್ಗಾಭಿಯೋಗದೊಳ್ |
ಧರೆಯ ಸತ್ಕರ್ಮಗಳ ಋಷಿಜನರ ಧರ್ಮಗಳ |
ನಿರತ ಬಾಧಕರಾಗಿ ದೇವರ್ಕಳಿಂ ಸೋತು ಶರಧಿ ಮಧ್ಯದೊಳಡಗಿರೆ || 10 ||

**ಭಾಮಿನಿ**
ಮುನಿಯಗಸ್ತ್ಯನು ಮಂತ್ರ ಮುಖದಿಂ |
ವನಧಿಯಂ ಶೋಷಿಸಲಿಕಿಂದ್ರನು |
ಕಿನಿಸಿನಿಂ ಸಂಹರಿಸುತಿರ್ದನು ಕಾಲಕೇಯರನು ||
ಕ್ಷಣದಿ ತಪ್ಪಿಸಿಕೊಂಡಡಗಿ ತಾವ್ |
ದನುಜ ವೀರರ ಬಳಸಿ ಗೆಲುವಡೆ |
ಗಣಿಸಿದರು ಕಾಲವನು ಪಾತಾಳದ ರಹಸ್ಯದಲಿ || 11 ||

**ಸೌರಾಷ್ಟ್ರ - ತ್ರಿವುಡೆ**
ರುಧಿರಮುಖಿ ರುದ್ರಾಕ್ಷ ನಾಮದ |
ಕದನಗಲಿಗಳು ಬಳಗಗೂಡುತ |
ಬೆದರಿಕೆಯನುಳಿದೆದ್ದು ವೃತ್ರನ | ಹದನವರಿತು || 12 ||
ತ್ವಷ್ಟ್ರ ಸುತವಧೆಗುರಿದು ಸೃಜಿಸಿದ |
ನಿಷ್ಟುಯಿಂದಾ ಘೋರ ವೃತ್ರನ |
ಸೃಷ್ಟಿ ಮೂರರೊಳತಿ ಪರಾಕ್ರಮಿ | ಗಿಷ್ಟರಾಗಿ || 13 ||
ದಿವಿಜರನು ಸದೆ ಬಡಿಯಲೆಮ್ಮಯ |
ನಿವಹವಾತನ ಸೇರಬೇಕೆಂ |
ದವರು ಪೊರಟರು ಸುರ ವಿರೋಧಿಯ | ಬವರದಿಳೆಗೆ || 14 ||

**ಕಾಂಬೋಧಿ - ಝಂಪೆ**
ಸುತ ವಿಶ್ವರೂಪನಂ ಮಥಿಸಿದಿಂದ್ರನ ವಧೆಗೆ |
ಪ್ರತಿಭಟಿಸಿ ಯಜ್ಞಮುಖದಿಂದ ||
ಶತಮಖನ ಶತ್ರುವಂ ಸೃಷ್ಟಿಸಿದನಾ ತ್ವಷ್ಟ್ರ |
ವತಿಘೋರ ವೃತ್ರ ಜನಿಸಿರಲು || 15 |
ಲೋಕಲೋಕಾಂತರದ ದೇವ ವೈರಿಗಳವನ |
ನೀಕಿನಿಯ ಬೆಳೆಸಿದರು ಬಳಸಿ ||
ನಾಕಮಂ ಗೆಲ್ಲುವರೆ ಪಾಕಶಾಸನನಳಿವ |
ನಾಕೆವಾಳನು ಬಯಸಿ ಪೊರಡೆ || 16 ||

**ಕೇದಾರಗೌಳ - ಅಷ್ಟ**
ಹೋಹೋ ಎನ್ನುತ ಬಾಹುವೆತ್ತಿ ಸಂತೋಷದಿ |
ಸ್ನೇಹ ಮುದ್ರೆಯ ತೋರುತ ||
ಸಾಹಸಿ ವೃತ್ರ ನೀನಾಹವಮಲ್ಲನೈ |
ಬಾಹೆವಾವ್ ನಿನ್ನೊಂದಿಗೆ || 17 ||

**ಮಧುಮಾಧವಿ - ಏಕ**
ಅಸುರ ಕುಲೋದ್ಭವರಾರಯ್ಯ ನೀವು |
ಕುಶಲವೇನೆಲ್ಲಿಹುದೈ ನಿಮ್ಮ ಠಾವು ||
ಅಸಮ ವಿಕ್ರಮಿಗಳಂದದಿ ತೋರ್ಪಿರಲ್ಲ |
ಪೆಸರೇನು ಸ್ನೇಹ ಕಾರಣ ಪೇಳಿರೆಲ್ಲ || 18 ||
ಕಾಲಕೇಯರು ನಾವ್ ಪಾತಾಳ ವಾಸಿಗಳು |
ಗೋಳಿಗಿಕ್ಕಿದನಿಂದ್ರ ಸಾವುನೋವಿನೊಳು ||
ಕೇಳಿ ಬಂದೆವು ನಿನ್ನದ್ಭುತದ ಸಾಹಸವ |
ಪಾಲುಗೊಳ್ಳುವೆವ್ ಮತ್ತೆ ವಿಜಯ ವೈಭವವ || 19 ||

**ಸೌರಾಷ್ಟ್ರ - ತ್ರಿವುಡೆ**
ಪಡೆ ನಡೆದುದೊಡಗೂಡಿ ಬಿಡುಗ |
ಣ್ಣೊಡೆಯನೂರಿಗೆ ದಡಿಗ ದೈತ್ಯರ |
ಗಡಣ ನುಗ್ಗಲು ತಡೆದು ನುಡಿದರು | ಗಡಿಯ ಭಟರು || 20 ||
ನಿಲ್ಲಿರೋ ಗುಲ್ಲೆಬ್ಬಿಸದೆ ನೀ |
ವೆಲ್ಲಿಯವರಿಲ್ಲೇನು ಕೆಲಸವು |
ಸೊಲ್ಲಿಪುದು ಕುಳ್ಳಿಹುದು ಸಮಯವ | ನೆಲ್ಲ ಕಾದು || 21 ||
ಪೇಳಿರೋ ನಿಮ್ಮಪ್ಪನಿಗೆ ಸುರ |
ರಾಲಯವನಾಳುವನು ವೃತ್ರನು |
ಕಾಲಿಗೆರಗುತ ಬಿಡಲಿಕೂರನು | ಬಾಳಗೊಡುವ || 22||

**ಆರ್ಯ ಸವಾಯಿ - ಏಕ**
ಬಂದುದದೊಂದೂ ಬದುಕಿದುದರಿಯೆವು |
ಮಂದ ಮತಿಗಳಿರ ಮತ್ತೇಕೆ ||
ಬಂದಿರಿ ಸಾಯಲು ನೆಲೆ ಬೆಲೆ ಕಾಣದೆ |
ಹಿಂದಕೆ ಪೋಗಿರಿ ಕಡು ಜೋಕೆ || 23 ||

**ಭಾಮಿನಿ**
ಅಟ್ಟಹಾಸವ ಗೈಯೆ ದಾನವ |
ಚಿಟ್ಟೆನುತ ಚೀರಿದರು ದೂತರು |
ಬಿಟ್ಟು ಬಿಡಿ ಜೀವದೊಳೆನುತ ಗೋಳ್ಗುಟ್ಟುವರ ಪಿಡಿದು ||
ಬೊಟ್ಟನಿಡುತಲಿ ಪೆಟ್ಟನಿಕ್ಕುತ |
ಲಟ್ಟೆ ಮರುಗುತ ಬಂದು ಪಾದವ |
ಕಟ್ಟಿ ಬಿನ್ನೈಸಿದರು ನಡುಗುತ ಬಿಟ್ಟಗಣ್ಣವಗೆ || 24 ||

**ಮುಖಾರಿ - ಏಕ**
ಒಡೆಯ ನೀ ಲಾಲಿಸಬೇಕು ನುಡಿಯ ||
ನಡೆಯಲಾರದ ದೊಡ್ಡ ಸೋಜಿಗ ಜೀಯ || ಒಡೆಯ ||
ದಡಿಗರು ರಕ್ಕಸ ಗಡಣವೆ ಬಂದಿದೆ |
ಒಡೆಯನಂತೆ ವೃತ್ರಾಸುರನೆಂಬನು |
ಗುಡುಗುಡಿಸುತ ಮುಂದಡಿಯಿಡೆ ತಡೆದರು |
ಒಡೆಯಗೆ ಪೇಳೆಂದೊದ್ದೆದಟ್ಟಿದರು || ಒಡೆಯ || 25 ||

**ಕೇದಾರಗೌಳ - ಮಟ್ಟೆ**
ಕಿಡಿಯ ಸೂಸಿ ಮಘವ ನುಡಿದ | ದಡಿಗ ದೈತ್ಯರ |
ಗಡಣ ಬರಲು ಬೆದರಲೇಕೆ | ಬಡಿದು ಮೂರ್ಖರ ||
ಬಿಡಿಪೆನೆಂದೆ ಸಗ್ಗದಾಸೆ | ಯೊಡನೆ ದಿವಿಜರ |
ಪಡೆಯು ಬರಲಿ ದಿಕ್ಪತಿಗಳೆ | ಹೊಡೆಸಿ ಢಂಗುರ || 26 ||
ಸುರಪನಿಂತು ಸೈನ್ಯ ಸಹಿತ | ಗುರುವನುಜ್ಞೆಯ |
ಶಿರದಿ ಧರಿಸಿ ಬಂದಸುರರ | ತರಿಯೆ ವೃತ್ರನು ||
ಕರೆದು ಕಳುಹೆ ದೈತ್ಯವರರ | ಧುರಕೆ ಸೇನೆಯ |
ಭರಿತವಾಯ್ತು ಸಮರವೇದಿ | ರುಧಿರ ಜಲ ಮಯ || 27 ||

**ಕೇದಾರಗೌಳ - ಝಂಪೆ**
ಭರ್ಗನನು ತಡೆಯುತಾಗ | ರುಧಿರಮುಖ |
ಭೋರ್ಗುಡಿಸುತೆಂದನೀಗ ||
ಸ್ವರ್ಗವನ್ನೆಮ್ಮೊಡೆಯಗೆ | ನೀಡುತಲಿ |
ನಿರ್ಗಮಿಸಿ ನೀವ್ ಸುಮ್ಮಗೆ || 28 ||
ಸುಟ್ಟುರುಹುವೆನು ದಾನವ | ಗಳಹದಿರು |
ದುಷ್ಟತನಕೇಂ ಗೌರವ ||
ಬಿಟ್ಟೀಗ ಸ್ವರ್ಧಾಮವ | ಸೆಳೆವ ಬಲ |
ವೆಷ್ಟಿಹುದು ನೀನಾರವ || 29 ||

**ಘಂಟಾರವ - ಅಷ್ಟ**
ಅಗ್ನಿ ಕೇಳೆನ್ನ ರುಧಿರಾಸ್ಯನೆಂಬರು |
ಸಗ್ಗವನು ಬಿಡದಿರಲು ಸುರಪುರ |
ನುಗ್ಗಿ ಸಿಗಿಬಿಗಿದೊಟ್ಟುವೆ || 30 ||
ಕೂಗಿ ಸಾಯದಿರೆಲವೊ ದಾನವ ನಿನ್ನ |
ಸಾಗಿಸುವೆ ಯಮಪುರಕೆನುತ ಧನು |
ತೂಗಿ ಶರಗಳನೆಚ್ಚನು || 31 ||

***ಯುದ್ಧ - ಅಗ್ನಿಯ ಸೋಲು***

**ಶಂಕರಾಭರಣ - ಮಟ್ಟೆ**
ಸರಳು ಖಡ್ಗ ಗದೆಗಳಿಂದ ಸಮರ ಗಯ್ಯಲು |
ತೆರಳಲಗ್ನಿ ಕಂಡು ಮರುತ ತಡೆದು ನಿಲ್ಲಲು || 32 ||
ಅರಿತು ರುದ್ರನೇತ್ರ ಬಂದು | ತಡೆಯಲಾತನ |
ದುರುಳನಾರೊ ಬಂದುದೇಕೊ | ಸಮರ ಸಲ್ಲದು || 33 ||

**ಮೆಚ್ಚುಗೌಳ - ಅಷ್ಟ**
ರುದ್ರಾಕ್ಷನೆಂದೆಂಬ ಕಾಲಕೇಯನು ನಿಮ್ಮ |
ಮರ್ದಿಸಿ ಸುರಪುರವ ||
ರುದ್ರೋಪಮನು ನಮ್ಮ ವೃತ್ರಾಸುರಾಖ್ಯಗೆ |
ಭದ್ರವಗೊಳಿಸುವೆವು || ಜೈಗೊಳಿಪೆವು || 34 ||
ಮರುಳು ದಾನವ ಸುರ ಸಿರಿಯ ಸೆಳೆಯ ಬಂದು |
ತೆರಳಿದವರು ನೀವಲ್ಲೈ ||
ದೊರೆಸಹ ಯಮಪುರಕೈದುವ ಕಾಲವೆಂ |
ದೆರಗಿದ ಸುಳಿದಾತನ || ಪ್ರಭಂಜನ || 35 ||

**ಮಾರವಿ - ಏಕ**
ಏರುತಲಾಕ್ಷಣ ವಾರಣವನು ಸುರ |
ವಾರವ ಸಂತೈಸಿ ||
ಸಾರೆಲೊ ಬಂದವನಾರೆಲೊ ಸ್ವರ್ಗವ |
ಸೂರೆಗೊಳಲು ಬಯಸಿ || 36 ||

**ಭೈರವಿ - ಏಕ**
ಅಣ್ಣನ ಕೊಂದಿಹ ತಾಪ | ಮೈ |
ಗಣ್ಣನೆ ನಾ ಪ್ರತಿರೂಪ ||
ಎನ್ನೈಯ್ಯನ ವರ ಪುತ್ರ | ಜಗಿ |
ದುಣ್ಣುವೆ ಬಾ ನಾ ವೃತ್ರ || 37 |
ತಾಮಸ ಗುಣ ಸಂಕಲಿಸಿ | ದು |
ಷ್ಕಾಮನೆಯಿಂದುದ್ಭವಿಸಿ ||
ಹೋಮದಿ ಜನಿಸಿದ ಭೂತ | ಸ್ವ |
ರ್ಧಾಮದ ಬಯಕೆಯ ಘಾತ || 38 ||
ಗುರು ಹತ್ಯೆಯ ಪಾತಕವು | ಸು |
ಟ್ಟಿರೆ ಸುರ ಸಂಪದದಳಿವು ||
ತೆರಳೀಕ್ಷಣ ಶರಣಾಗಿ | ನೀ |
ತಿರುಪೆಯೊಳಿರು ಬಡ ಜೋಗಿ || 39 ||
ಮಿತಿ ಬೇಕತಿಯಹಮಿಕೆಗೆ | ಅ |
ಹತಿಯೆಂತರಿಯದ ಮತಿಗೆ ||
ಗತಿಗಾಣುವ ಕಡೆಗಾಲ | ಬಂ |
ದಿತು ಬವರದಿ ಕೈ ಸೋಲ || 40 ||

**ಪಂತುವರಾಳಿ - ಮಟ್ಟೆ**
ತಾಳಿಕೊಳ್ಳೆನುತ್ತ ವೃತ್ರ |
ಮೇಲುವರಿದು ಗಜವ ಸುರರ |
ಪಾಲನನ್ನು ಹೊಯ್ದನಮಮ | ಸೋಲವಾಯಿತು || 41 ||

**ನಾಟಿ - ಝಂಪೆ**
ವೃತ್ರನಾಕ್ರಮಿಸಲ್ಕೆ ಸುತ್ರಾಮ ನಗರಿಯನು |
ಗೋತ್ರಾರಿ ಕಂಗೆಟ್ಟು ಸುರರು ಸಹಿತ ||
ನಿತ್ಯನಿರ್ಮಲಮೂರ್ತಿ ಸತ್ವಗುಣಿ ಸಲಹೆಂದು |
ಕೀರ್ತಿಸುತ ವೈಕುಂಠಧಾಮಕೈದ || 42 ||

**ಆನಂದ ಭೈರವಿ - ಆದಿ**
ಸ್ಥಿತಿಪ ಕರುಣ ವಾರಿಧಿ | ರಕ್ಷಿಸು ದೇವ |
ಪತಿತೋದ್ಧರಣ ಶ್ರೀನಿಧಿ ||
ಗತಿಗಾಣೆವೈ ಲಕ್ಷ್ಮೀ | ಪತಿ ನೀನು ಮೈದೋರಿ |
ವ್ಯಥೆಗೊಳಗಾದೆಮ್ಮ | ಪತಿಕರಿಸೈ ತಂದೆ || 43 ||
ವೃತ್ರ ದಾನವನಟ್ಟುಳಿ | ಕೈಸೋತೆವು |
ದೈತ್ಯರಿಂ ವನಮಾಲಿ ||
ಇತ್ಯರ್ಥವಿಲ್ಲದ | ನರ್ಥ ಸಂಭವಿಸಿತು |
ಸತ್ವಗುಂದಿತು ಧರ್ಮ | ಸತ್ಯವಳಿಯೆ ಲೋಕ || 44 ||

**ಮಧ್ಯಮಾವತಿ - ತ್ರಿವುಡೆ**
ನಾಕಿಗರೆ ನಿಮಗೇಕೆ ವ್ಯಾಕುಲ |
ಲೋಕ ವಂದ್ಯರು ನೀವು ಕರ್ಮ ವಿ |
ಪಾಕಕರ್ಹರೆ ದುಃಖಿಸುವುದೇಂ |
ಪಾಕಶಾಸನನೀಪರಿ || ಪೇಳ್ವುದೆನಗೆ || 45 ||
ಮಾನಿ ಬಿನ್ನಹ ತ್ವಷ್ಟೃ ಸೃಜಿಸಿದ |
ನಾನಲಾರದ ವೃತ್ರನೆಂಬನ |
ಹಾನಿ ಸುರಸಂದೋಹಕಾದುದು |
ತ್ರಾಣಿಯಾತನ ಸಮರದಿ || ಪೇಳುವುದೇನು || 46 ||
ಗುರುವನುಗ್ರಹವಳಿದ ದೋಷವು |
ಧರಣಿಸುರ ವಧೆ ಸೋಲವಲ್ಲದೆ |
ಬರಿದೆ ಹೋಹುದೆ ವೃತ್ರ ಸೃಷ್ಟಿಯು |
ಪರಮ ತಾಮಸದಿಂದಲಿ || ರಚಿತವಾಯ್ತು || 47 ||

**ಮಧುಮಾಧವಿ - ಏಕ**
ಬೇಡಿಕೊಳ್ಳಿರಿ ಪೋಗಿ ಮುನಿ ದಧೀಚಿಯನು |
ಕ್ರೋಢೀಕರಿಸುತವನಾಯುಧಗಳನು ||
ಮಾಡಿ ಜೀರ್ಣವ ಬೆನ್ನಹುರಿಯೊಳಿಟ್ಟಿಹನು |
ನೀಡಲಪ್ಪುದು ವೃತ್ರಹನನವಿನ್ನೇನು || 48 ||

**ಭಾಮಿನಿ**
ಹರಿ ನಿರೂಪವ ಧರಿಸಿ ಸುರಪತಿ |
ಗುರು ಬೃಹಸ್ಪತಿ ಸುರರು ಸಹಿತಲಿ |
ಪೊರಟು ಬಂದ ದಧೀಚಿ ಮುನಿವರನಾಶ್ರಮದಕಡೆಗೆ ||
ಪರಮ ಪಾವನೆಯಾ ಸರಸ್ವತಿ |
ಸರಿತೆ ಪಾವನಚರಿತೆಯೊತ್ತಿಲಿ |
ಮೆರೆವ ಪುಣ್ಯಾಶ್ರಮದಿ ಭೃಗುಸುತನಿರುವ ತಾವರಸಿ || 49 ||

**ಮಧ್ಯಮಾವತಿ - ತ್ರಿವುಡೆ**
ವೇದ ವಾಙ್ಮಯ ವಾರ್ಧಿ ಮಂತ್ರ ಮ |
ಹೋದಧಿಯು ಸಚ್ಛಾಸ್ತ್ರ ಶರಧಿಯು |
ಸಾಧಕಾಂಬುಧಿ ಚಂದ್ರ ತತ್ತ್ವ ಸು |
ವಾದಿಯಾದ ದಧೀಚಿಯು || ತಪದೊಳಿರಲು || 50 ||
ಮಣಿದು ನಿಂದಿಹ ದೇವ ವರ್ಗವ |
ಮುನಿಯು ಸತ್ಕರಿಸುತ್ತಲುಚಿತಾ |
ಸನವನೀಯುತ ಮೊಗವನೀಕ್ಷಿಸು |
ತನುನಯದಿ ತಾ ಕೇಳಿದ || ಗುರುವಿನೊಡನೆ || 51 ||
ಬೆರಗನಾಂತೆನು ಸುರಸಮೂಹವು |
ಸೊರಗಿ ಕೊರಗಿದ ತೆರದಿ ಕಾಂಬುದು |
ಹರಿಹರಾದ್ಯರೆ ಪೊರೆವ ಮಹಿಮರ |
ಗುರು ಬಲವು ನೀವೀರ್ಪಿರಿ || ಬಂದುದೇನು || 52 ||

**ಮಧುಮಾಧವಿ - ಏಕ**
ಪೇಳಲಾರೆವು ಪೇಳದುಳಿಯದಾಗಿಹೆವು |
ಕಾಲವಿಂತಾಗಿದೆ ಮೂಲೋಕದುಳಿವು ||
ಮಾಲೋಲನಪ್ಪಣೆಯಾಂತು ಬಂದಿಹೆವು |
ನಾಲಿಗೆ ಬಡವಾಯ್ತು ಬವಣೆ ಭೀಕರವು || 53 ||
ವೃತ್ರನೆಂಬಸುರನ ತ್ವಷ್ಟೃ ಸೃಷ್ಟಿಸಿದ |
ಸುತ್ರಾಮನನು ಗೆದ್ದು ಸ್ವರ್ಗವ ಪಡೆದ ||
ಸತ್ರ ನೂರರ ಪುಣ್ಯ ನಿತ್ರಾಣವಾಯ್ತು |
ಚಿತ್ರವಾಗಿದೆ ನಮ್ಮೊಳ್ ಹರಿಪೇಳ್ದ ಮಾತು || 54 ||
ನಿನ್ನ ಬೆನ್ನೆಲುಬಿಂದಲಾಯುಧ ಗೈದು |
ಅನ್ನೆಯದಸುರನ ಗೆಲ್ಲುವುದೆಂದು ||
ಪನ್ನಗಶಯನ ಪೇಳಲು ಬಂದೆವಿಂದು |
ಮನ್ನಿಸಬೇಕೆಮ್ಮ ಹೇ ತಪೋಸಿಂಧು || 55 ||

**ಭಾಮಿನಿ**
ಕೇಳಿ ವಿಸ್ಮಿತನಾದನಾ ಮುನಿ |
ಕಾಲ ಮಿತಿಯೈ ಬಾಳ್ವ ದೇಹಕೆ |
ಪೇಳಲೇನಿದೆ ಲೋಕದೊಳಿತಿಗೆ ತ್ಯಾಗವೇ ತಪವು ||
ಕಾಲರುದ್ರನ ನಿಟಿಲ ವಹ್ನಿ |
ಜ್ವಾಲೆಗಿತ್ತನು ತನ್ನ ಬಾಲನ |
ಶ್ರೀಲಲಾಮನಿಗಧಿಕನೇ ಮಹದಾನ ಸಂಮಾನ || 56 ||

**ಕಾಪಿ - ಅಷ್ಟ**
ಆಯುಧವಾಗೆ ಬೆನ್ನೆಲುವು | ಎನ್ನ |
ಕಾಯಕಾಯಿತು ಸಾರ್ಥ ನಿಮಗಾಗೆ ಗೆಲುವು ||
ನೋಯದೆ ಕೊಡುವೆ ದೇಹವನು | ಸೀಳಿ |
ಶ್ರೇಯವ ಪಡೆಯಿರಿ ವಧಿಸಿ ವೃತ್ರನನು || 57 ||

**ವಾರ್ಧಕ**
ಮುನಿಯ ಪದಕಭಿನಮಿಸಿ ಸುರರೆಲ್ಲರರ್ಚಿಸಲ್ |
ಘನಯೋಗಮಂ ತಳೆದನಾ ದಧೀಚಂ ಬಳಿಕ |
ದಿನಪನಂದದಿ ಬೆಳಗಿ ತೊರೆದನವ ದೇಹಮಂ ನಭಕಡರೆ ದಿವ್ಯ ತೇಜ ||
ಎಣಿಸಲಳವೇ ಮಹಾ ತ್ಯಾಗಮಂ ಪರಹಿತಕೆ |
ತನುವ ತೆತ್ತವರುಂಟೆ ಬೆನ್ನೆಲುಬ ತೆಗೆಯುತ್ತ |
ಮೊನೆಗೊಳಿಸುತಣಿಗೊಳಿಸಿ ವಜ್ರಾಯುಧಂಗೈದು ದಿವಿಜರಾಂತರು ಸಂತಸ || 58 ||

**ಸೌರಾಷ್ಟ್ರ - ತ್ರಿವುಡೆ**
ಮುತ್ತಿರೋ ದಾನವರ ಸ್ವರದಿಂ |
ದೊತ್ತಿರೋ ನೀವೆಂದು ಕ್ರೋಧದಿ |
ಸುತ್ತುವರಿದಬ್ಬರಿಸಿತಾ ಸುರ | ಮೊತ್ತವೆಲ್ಲ || 59 ||
ಕೇಳಿದನು ಚರರಿಂದ ವಾರ್ತೆಯ |
ಬಾಳಲೆಂದಾಂ ಬಿಟ್ಟ ಸುಮನಸ |
ತೋಳಿ ಮರಳಿತೆ ಸೀಳಿ ಬಿಸುಡಿರಿ | ಖೂಳರನ್ನು || 60 ||

**ಪಂತುವರಾಳಿ - ಮಟ್ಟೆ**
ಸ್ಮರಿಸೆ ಬಂದನಾ ಗಜೇಂದ್ರ |
ಸುರಪನೇರಿ ಕುಲಿಶವಿಡಿದು |
ದುರುಳ ಸಾರೆನುತ್ತ ಬಂದ | ನುರಿದು ಶೌರ್ಯದಿ || 61 ||
ಬಂದೆಯಾ ದುರಾತ್ಮ ನಿನ್ನ |
ಕೊಂದು ಕೂಗದಿರೆನೆನುತ್ತ |
ಹೊಂದಿ ಘೋರ ರೂಪವನ್ನು | ಬಂದ ವೃತ್ರನು || 62 ||

**ಪಂತುವರಾಳಿ - ಮಟ್ಟೆ (ಪ್ರಭೇದ)**
ಬಿಟ್ಟು ತೆರಳು ದುರುಳ ಸ್ವರ್ಗವ | ಆಕ್ರಮಿಸುತ ದೇಹ ಬಲದಿ |
ಕೆಟ್ಟೆ ನೀನು ತ್ವಷ್ಟ್ರಸಂಭವ || ಪ ||
ಕೊಟ್ಟರಿದನು ನೂರು ಯಾಗದಿ | ಸತತ ಶ್ರಮದೊ |
ಛೊಟ್ಟುಗೈದ ಮಖದ ಪುಣ್ಯದಿ |
ಕೆಟ್ಟರೆಲ್ಲ ಬಂದು ದಾಳಿ |
ಇಟ್ಟರಟ್ಟಹಾಸ ಗೈದು |
ಸುಟ್ಟು ನಾಶವಾದರಿಲ್ಲಿ |
ಕಟ್ಟಕಡೆಗೆ ನಷ್ಟ ಮಾತ್ರ || ಬಿಟ್ಟು ತೆರಳು || 63 ||
ಮಂದಮತಿಯೆ ಕೊಂದು ಗುರುವನು | ಗೈದ ಪಾಪ |
ಹೊಂದಿಸಿಹುದು ಹೀನ ಗತಿಯನು ||
ಹಂದೆ ಪೋಗಿ ಬೇಡಿ ಬದುಕ |
ಲೆಂದು ಬಿಟ್ಟರೈದಿ ಮತ್ತೆ |
ಬಂದು ಬುದ್ಧಿ ಪೇಳ್ವೆ ನಿನ್ನ |
ಕೊಂದು ಕಳೆವೆ ತಾಳು ತಾಳು || 64 ||

**ಭಾಮಿನಿ**
ಘೋರ ರಣ ಗಂಟಿಕ್ಕಲಿಕ್ಕಡೆ |
ಭಾರಿ ಶಸ್ತ್ರಾಸ್ತ್ರಗಳೊಳುಬ್ಬಟೆ |
ದೋರಿ ಸೆಣಸಿದರಮಮ ಮೂಜಗ ಜರ್ಝರಂಗೊಳಲು ||
ಭಾರಿಯಾಕಾರದಲಿ ಬಾಯ್ದೆರೆ |
ದಾರುಭಟಿಸುತ ವೃತ್ರನಿಂದ್ರನ |
ವಾರಣವು ಸಹಿತೆಳೆದು ನುಂಗಿದನಧಿಕ ರೋಷದಲಿ || 65 ||

**ಕಾಂಬೋಧಿ - ಝಂಪೆ**
ಕುಣಿದುದುದ್ಘೋಷದಲಿ ದನುಜಕುಲ ಸಂತಸದಿ |
ಅನಿಮಿಷೇಶ್ವರನಳಿದನೆಂದು ||
ಘನ ಚಿಂತೆಯಾವರಿಸಿ ದೇವತತಿ ಬೆರಗಾದು |
ದಿನಿತೆಂತು ಸಂಘಟಿಸಿತೆಂದು || 66 ||
ಸೀಳಿತೈರಾವತವು ವೃತ್ರನುದರವ ಕ್ಷಣದಿ |
ಛೀಳಿಡುತ ರೋಷಾತಿಶಯದಿ ||
ಕೊಲಾಹಲಂಗೈಯುತೊರಗಿದನು ರಕ್ಕಸನು |
ಬಾಳುಳಿಯಲಿಂದ್ರ ಪೊರವಂಟ || 67 ||
ಕುಲಿಶಮಂ ತೆಗೆದಸುರಗಳವ ಕತ್ತರಿಸಿದನು |
ಹೊಲಬುಗೆಟ್ಟೋಡೆ ರಕ್ಕಸರು ||
ಬಳಿಕ ನಾಕಿಗರೆಲ್ಲ ವಿಜಯೋತ್ಸವದೊಳುಬ್ಬೆ |
ಬಲವೈರಿ ವಿಷ್ಟರವನೇರ್ದ || 68 ||

**ವಾರ್ಧಕ**
ವಿದ್ಯಾಧರೇಶ್ವರಂ ಚಿತ್ರಕೇತುವೆನಿಪ್ಪ |
ಸದ್ಭಕ್ತ ಹರಿಶರಣ ಚರಿಸುತ ವಿಮಾನದೊಳ್ |
ಹೊದ್ದಿದಂ ಕೈಲಾಸ ಕಂಡ ಶಿವ ಪಾರ್ವತಿಯನಂಕದೊಳು ಕುಳ್ಳಿರಿಸುತ ||
ಇದ್ದನೋಲಗದೊಳಿವ ನಿಂದಿಸಲ್ ಶಿವೆ ಕೇಳು |
ತುದ್ಧತನೆ ನೀನಸುರ ಜನ್ಮದೊಳ್ ಜನಿಸೆಂದು |
ಕ್ರುದ್ಧಳಾಗುತ ಶಾಪವಿತ್ತುದರ ದೆಸೆಯಿಂದಲುದ್ಭವಿಸಿದಂ ಯಜ್ಞದಿ || 69 ||

**ಸಾಂಗತ್ಯ - ರೂಪಕ**
ಅಗ್ನಿಸಂಭವನಾಗಿ ತ್ವಷ್ಟೃವು ಸೃಜಿಸಲ್ಕೆ |
ಅಗ್ರಜನ್ಮಜನಾದನವನು ||
ಲಗ್ನಗೊಂಡುದು ಪೂರ್ವಾಪರಗಳಿಂದ್ರನು ಕೊಲ್ಲ |
ಲುಗ್ರವಾದುದು ಬ್ರಹ್ಮಹತ್ಯೆ || 70 ||
ದೋಷವಾವರಿಸಲು ಕಂಗೆಟ್ಟು ಸುರಪಾಲ |
ಕ್ಲೇಶದಿಂ ಬಳಲಿ ಬೆಂಡಾದ ||
ಘಾಸಿಗೊಂಡುದು ಕಾಯ ಬಲ ತೇಜಗುಂದಲು |
ಮೈಸಿರಿಯಳಿಯೆ ಕ್ಷೀಣಿಸಿದ || 71 ||

**ನೀಲಾಂಬರಿ - ರೂಪಕ**
ಇಂತೆಂತಾದುದು ಶಿವ ಶಿವ |
ನಾಂ ತಿಳಿಯೆನು ಮೈಮನದೊಳು |
ಕಂತಿದೆ ಕ್ಲೇಶಗಳೆಲ್ಲವು | ಬೆಂತರದಂತಿಹುದು ||
ಮುಂತೇಂಗೈವುದು ಸಗ್ಗದ |
ನಂತ ಸಿರಿಯು ಮುಳ್ಳಾಯಿತೆ |
ಚಿಂತೆಯನುಳಿದೇಂ ಕಾಣದು | ಕಾಂತೆ ಶಚಿಯೆ ಕೇಳು || 72 ||
ಕಾಣದುಳಿವೆನು ರಹಸ್ಯದಿ |
ಧ್ಯಾನಿಸುವೆನು ಪರವಸ್ತುವ |
ಕ್ಷೀಣತ್ವದ ಕ್ಲೇಶಂಗಳ | ನಾನನುಭವಿಸುವೆನು ||
ಹಾನಿಗೊಳದೆ ಸುರ ಪೀಠವು |
ಮಾನಿತವಾಗಲಿ ರಕ್ಷಿಸಿ |
ಊನಗೊಳದ ತೆರನೆನ್ನುತ | ತಾನಿಳಿದನು ಸುರಪ || 73 ||

**ಭಾಮಿನಿ**
ನಳಿನ ನಾಳದೊಳಿಳಿದು ಸೂಕ್ಷ್ಮದೊ |
ಳುಳಿದು ಗುಪಿತದೊಳಿರಲು ಮಘವನು |
ಕಳವಳದಿ ನಿಸ್ತೇಜವಾಯಿತು ಸುಮನಸಾವಳಿಯು ||
ಬಳಿಕ ಗುರು ಮರುತಾಗ್ನಿ ಮುಖ್ಯರ |
ಬಳಿಗೆ ಕರೆದನು ಬದಲು ಯತ್ನಕೆ |
ಇಳೆಯನಾಳ್ವ ಸಮರ್ಥರನು ನೆಲೆಗೊಳಿಸಬೇಕೆನುತ || 74 ||

**ಮಧುಮಾಧವಿ - ಏಕ**
ಲೋಕಪಾಲಕರೆಲ್ಲರಾಲಿಸಿ ನುಡಿಯ |
ಪಾಕಶಾಸನನಿಲ್ಲದಾದ ಸಂಗತಿಯ ||
ಕಾಕು ರಕ್ಕಸ ತೋಳಿ ಭೀಕರವಹುದು |
ಭೂಕಾಂತರೊಳಗೋರ್ವನೈದಲೇನಹುದು || 75 ||
ಗುರುವರ್ಯ ಧರೆಯೊಳಗಿಹನೋರ್ವ ಸಹಸಿ |
ಸುರಪಗೆ ಸಮನೆಂದು ಪೊಗಳಿದೆ ಜಗತಿ ||
ಧರೆಯನೇಕಚ್ಛತ್ರದೊಳಗಾಳ್ವ ನಹುಷ |
ಸುರಪಾಲನಾದರೆ ಮೆರೆವುದು ಹರುಷ || 76 ||

**ಕಾಪಿ - ಅಷ್ಟ**
ಚಕ್ರೇಶ್ವರನ ಕರೆತಂದು | ಸುರ |
ಚಕ್ರವ ಪೊರೆಯಲೊಪ್ಪಿಸುವುದೆ ಸಿಂಧು ||
ಶಕ್ರಗೆ ಸಮನಾ ಭೂಪತಿಯು | ಬಲು |
ವಿಕ್ರಮಿ ಬರಲಿಲ್ಲಿ ನಿಲುವುದಟ್ಟುಳಿಯು || 77 ||

**ಕಂದ**
ಸುರ ಸಂದೋಹದ ನುಡಿಯಂ |
ಗುರು ತಾನೊಪ್ಪುತಲಿ ನಹುಷನೆಡೆಗಂ ತೆರಳಲ್ ||
ಮರುತಾಗ್ನಿಗಳಂ ಕೂಡುತ |
ಪೊರಟಂ ಚಕ್ರೇಶನಾಳ್ವ ನಗರಿಯ ಕಡೆಗಂ || 78 ||

***ನಹುಷನ ಪ್ರವೇಶ***

**ಸೌರಾಷ್ಟ್ರ - ತ್ರಿವುಡೆ**
ಆಯು ಸಂಭವನಾಳುತೀರ್ದನು |
ಆಯತಿಯ ಸದ್ಧ್ಯೇಯದೆರೆಯನು |
ಶ್ರೇಯ ಪ್ರೇಯಃ ಕಾಂಕ್ಷಿ ಪ್ರಜರಿಗೆ | ರಾಯ ನಹುಷ || 79 ||
ದೊರೆ ನಹುಷನಾಳ್ತಿರಲು ಧರ್ಮದ |
ಸಿರಿಯು ಪಟ್ಟದ ಮಣೆಯನೇರಿತು |
ಧರಣಿ ತಣಿಯಿತು ಯಾಗ ಯಜ್ಞೋ | ತ್ಕರುಷದಿಂದ || 80 ||

**ತುಜಾವಂತು - ಝಂಪೆ**
ಜಾಯೆಯಾದಳಶೋಕ ಸುಂದರಿಯು ಯತಿ ಯಯಾ |
ತ್ಯಾಯಾತಿ ಸಂಯಾತಿ ವಿಯತಿ ಕೃತಿ ಸುತರು ||
ರಾಯಗೀಯುವರು ಸಿದ್ಧಾರ್ಥಯವನು ಸಾಮಂತ |
ರಾಯರತ್ಯುನ್ನತಿಯು ಮೆರೆಯೆ ಚಕ್ರೇಶ || 81 ||
ಓಲಗಂಗೊಟ್ಟಿರಲು ಮರುತಾಗ್ನಿ ಗುರುಗಳಾ |
ಭೂಲಲಾಮನ ಸಭೆಗೆ ಬರಲು ಕಂಡೆದ್ದು ||
ಮೇಲು ಲೋಕದ ದಿವ್ಯ ದೇಹಿಗಳ ಬೆರಗಿನಿಂ |
ದೋಲಗಿಸಿ ಬೆಸಗೊಂಡನುಚಿತಮಂ ಗೈದು || 82 ||

**ಸೌರಾಷ್ಟ್ರ - ಅಷ್ಟ**
ದಿವ್ಯತ್ವ ಮೈವಡೆದೈತಂದಂತಾಯಿತು | ಯಾರು ನೀವು || ನೋಡೆ |
ಹವ್ಯವಾಹನನುರಿ ತಂಪಾದಂತಾಯಿತು || ಯಾರು ನೀವು || 83 ||
ಧನ್ಯನಾದೆನು ಬಹು ಪುಣ್ಯದ ಫಲವಿದು || ಆರು ನೀವು | ಬಹು |
ಮಾನ್ಯರೆ ನನ್ನಿಂದಲಪ್ಪ ಕಾರ್ಯವ ಪೇಳಿ || ರಾರು ನೀವು || 84 ||
ದೇವ ಗುರುವು ನಾನು ಮರುತಾಗ್ನಿಗಳು ಸೇರಿ | ಭೂಪ ಕೇಳು || ನಿನ್ನ |
ಭೂವಲಯಕೆ ಬಂದೆವೆಮ್ಮೊಂದು ಕಾರ್ಯಕೆ || ಭೂಪ ಕೇಳು || 85 ||

**ಭಾಮಿನಿ**
ಅರಸ ಕೇಳೈ ವೃತ್ರ ನಾಮದ |
ದುರುಳನನು ಸಂಹರಿಸೆ ಸುರಪತಿ |
ಗರುವನಾತನ ತೇಜ ಪಿಡಿಯೆ ಸುಧರ್ಮಮಂ ತೊರೆದು ||
ಮರೆಯಗೊಂಡಿಹ ಸುರ ನಿವಹಮಂ |
ಪೊರೆವರಾರಿಲ್ಲೀಗ ನಿನ್ನನು |
ಕರೆತರಲು ದಿಕ್ಪಾಲರಾಣತಿಯಾಯ್ತು ಬಂದಿಹೆವು || 86 ||

**ಸೌರಾಷ್ಟ್ರ - ತ್ರಿವುಡೆ**
ಪುಣ್ಯವಂತನು ದುಷ್ಕರಟ್ಟುಳಿ |
ಯನ್ನು ತಡೆವ ಸಮರ್ಥನೆನ್ನುತ |
ಮಾನ್ಯತೆಯನಿತ್ತಿಹರು ಸುರವರ | ರಿನ್ನು ಬಾರೈ || 87 ||
ವಿಸ್ಮಯಂಬಡುತೆಂದನೇನಿದು |
ಕಶ್ಮಲವು ನರದೇಹ ಸ್ವರ್ಗದ |
ವಿಷ್ಟರವನೇರುವರೆ ಸಾಧ್ಯವೆ | ಕಷ್ಟವೈಸೆ || 88 ||
ದಿವ್ಯತೆಯನೀಯುವೆವು ತೈಜಸ |
ವವ್ಯಯತ್ವದಿ ತುಂಬಿಸುತ್ತಲಿ |
ಭವ್ಯನಪ್ಪಂತೆಸಗುತೀವೆವು | ದಿವ್ಯ ಸಿರಿಯ || 89 ||

**ವಾರ್ಧಕ**
ಬಲು ಮಾತಿನಿಂದವನ ಸಂದೇಹಮಂ ಸರಿಸ |
ಲಿಳೆಯಾಣ್ಮ ಪಿರಿಯ ಸುತ ಸನ್ಯಾಸದೊಳ್ ತೆರಳೆ |
ಬಳಿಕಲೆರಡನೆಯ ಸುತನಾಗಿಹ ಯಯಾತಿಗಿತ್ತಂ ಸಕಲ ಸಾಮ್ರಾಜ್ಯವ ||
ನಿಲಿಸುತಾತಂಕಮಂ ಸತಿಯ ತಾನೊಡಬಡಿಸಿ |
ಕುಲದ ಹಿರಿಮೆಗೆ ಸಂದ ಸೌಭಾಗ್ಯಮೆಂದೆಣಿಸು |
ತೊಲವಿನಿಂ ಸುರರೊಡನೆ ಸ್ವರ್ಗ ಧಾಮಕ್ಕೈದ ವೀರವರ ನಹುಷ ನೃಪನು || 90 ||

**ದ್ವಿಪದಿ**
ದೇವ ಋಷಿ ಗಡಣವೀಯಲು ದಿವ್ಯತೆಯನು |
ಭೂವರಂ ತೊಳಗಿದನು ಕಳೆದು ಮರ್ತ್ಯವನು || 91 ||
ಅಮರ ಸಿಂಹಾಸನಕ್ಕೇರಿಸುತ ನೃಪನ |
ಕ್ರಮದಂತೆ ಸ್ವರ್ಗದಧಿಕಾರವಿತ್ತವನ || 92 ||
ಬಹು ವಿಧದೊಳೋಲೈಸೆ ಸಭೆ ಸೇರಿತಂದು |
ಅಹಹ ನೃತ್ಯ ವಿಲಾಸದಪ್ಸರೆಯರ್ಬಂದು || 93 ||
ನೃಪಗೆರಗಿ ತೊಡಗಿದರು ನಾಟ್ಯ ವೈಭವವ |
ಅಪರಿಮಿತ ತೋಷದಿಂ ಮೆರೆವ ಸಂಭ್ರಮವ || 94 ||

**ಶಂಕರಾಭರಣ - ಅಷ್ಟ**
ನಲಿದರು | ದೇವ | ಲಲನೆಯರೊಂದಾಗಿ | ನಲಿದರು || ಪ ||
ಕಲಹಂಸಗಮನೆಯರಾಗ | ಥಳ |
ಥಳ ಬಳುಕುವ ದಿವ್ಯ ಯೋಗ || ಸೊಕ್ಕು |
ತೆಳಸಿ ಬೆಳಸಿ ಸುತ್ತಿ | ಸುಳಿವ ನಾಚುವ ಕಂಗ |
ಳೊಳು ಮಾತನಾಡುವ | ಚೆಲುವ ಸೂಸುತಲಾಗ || ನಲಿದರು || 95 ||

**ಭೈರವಿ - ತ್ರಿವುಡೆ**
ಮದನನೆತ್ತಿದ ಹೆದೆಯ ಹೂವೆನೆ |
ಮೃದು ಮದಾಲಸ ಯಾನೆಯರ್ |
ಪದ ವಿಲಾಸದಿ ಹಂಸ ಗಜ ಮಂಡೂಕ ಗತಿಯೊಳಗಾಡಿದರ್ ||
ಮೃದುಲವಾಲೋಕಿತ ನಿಮೀಲಿತ |
ಸಾಚಿ ಸಮದೃಷ್ಟಿಗಳೊಳು |
ಚದುರೆಯರು ನವರಸ ವಿಲಾಸದೊ | ಳಭಿನಯವ ವಿಧ ವಿಧದಿ ತೋರ್ದರು || 96 ||

**ಭೈರವಿ - ಝಂಪೆ**
ಮೆಚ್ಚಿದಂ ನೃಪವರಂ ವೈಭವದ ನರ್ತನಕೆ |
ಮೆಚ್ಚುಗಳನಿತ್ತು ಸತ್ಕರಿಸಿ ತೋಷಿಸಿದ || 97 ||
ದಿಕ್ಪಾಲರುಗಳಿಂದ ಪಡೆಯುತ ಪುರಸ್ಕಾರ |
ಸೂಕ್ತಾಧಿಕಾರಗಳನಿತ್ತು ಮನ್ನಿಸಿದ || 98 ||

**ವಾರ್ಧಕ**
ದೇವಗಣ ದಿವ್ಯತ್ವ ಋಷಿಗಡಣ ತಪದ ಫಲ |
ವಾವರಿಸಲರಸನುಜ್ವಲಿಸಿದಂ ಸ್ವರ್ಗಮಂ |
ಠೀವಿಯಿಂದಾಳುತ್ತ ಮೆರೆದನವ ವೈಭವದೊಳತಿ ಮೋದ ಮದವೇರಿಸೆ ||
ದೇವ ವನ ಮೇರು ಶೈಲಾದಿ ಸುಸ್ಥಳದೊಳಂ |
ತೀವಿದತಿ ಬಲದಿಂದಲಪ್ಸರೆಯರಂ ರಮಿಸು |
ತಾವಾವ ಸುಖಮೆಂಬುದುಂಟದರನನುಭವಿಸಿ ನಾಕೇಶನೆನಿಸಿರ್ದನು || 99 ||

**ಕಾಂಬೋಧಿ - ಝಂಪೆ**
ಕಳೆಯೆ ಕೆಲಕಾಲವೀಪರಿಯಿಂದ ನಹುಷನೊಳು |
ನೆಲಸಿತತಿ ಮದವೇನನೆಂಬೆ ||
ಬಲು ಬಲದ ಗರ್ವದಲಿ ಝಂಕಿಸುತ ದೇವತತಿ |
ಗಳಿಗೆ ದುಸ್ಸಹನಾದನವನು || 100 ||

**ಮಧುಮಾಧವಿ - ತ್ರಿವುಡೆ**
ಇಂದ್ರಸತಿ ಶಚಿ ಪತಿ ವಿಯೋಗದಿ |
ನೊಂದು ಬೇಸರ ಕಳೆಯಲೆನ್ನುತ |
ಇಂದುಮುಖಿ ಸುರನಂದನದ ವನ |
ಕೆಂದು ತಾನೈತಂದಳು || 101 ||
ಇನಿಯನೊಂದಿಗೆ ದಿನವ ಕಳೆದುದ |
ನೆನೆಸಿಕೊಳ್ಳುತ ಮನದಿ ಸುಖಿಸುತ |
ವನಿತೆಯುದ್ಯಾನದಲಿ ವಿಹರಿಸಿ |
ಮನದ ಚಿಂತೆಯ ಮರೆತಳು || 102 ||

**ಸೌರಾಷ್ಟ್ರ - ತ್ರಿವುಡೆ**
ನಂದನವ ನೋಡುವ ಮನೋಗತ |
ದಿಂದ ನಹುಷನು ಬಂದನಲ್ಲಿಗೆ |
ಸುಂದರಾಂಗಿಯ ಕಂಡು ಮತಿ ಭ್ರಮೆ |
ಹೊಂದಿ ನುಡಿದ || 103 ||

**ನವರೋಜು - ಏಕ**
ಯಾರೀ ಸುಂದರಿ ಪ್ರೌಢಿ | ಅಹ |
ಮಾರನ ಕೈ ಸಿಂಗಾಡಿ ||
ವಾರಿಜಮುಖಿ ವೈ | ಯಾರಿಯ ನಾ ಸುರ |
ವಾರದೊಳೀವರೆ | ಗಾರನು ಕಾಣೆನು || 104 ||

**ಖಮಾಚು - ಏಕ**
ನಾರಿ ಯಾರೆ ಶೃಂಗಾರೆ ಮನೋಹರಿಯೆ | ಮದ |
ವೇರಿದಾನೆ ಮರಿಯೆ || ಪ ||
ಆರು ನೀನು ಮತ್ತಾರವಳೆಂದರಿಯೆ |
ಮಾರನಸ್ತ್ರವೆದೆ ಸೇರಿ ಸೋತೆ ನಾ |
ನೀರೆ ಕೈಪಿಡಿದು ದಾರಿ ತೋರುವೆಯ || 105 ||

**ಕುರುಂಜಿ - ಝಂಪೆ**
ವೀರ ನಹುಷಾಖ್ಯ ನೀನಿಂತು | ಮೇರೆ |
ಮೀರಿ ಮಾತಾಡುತಿಹೆ ಭ್ರಾಂತು ||
ದಾರಿ ತಪ್ಪಿದೆಯ ಸುರರೊಡೆಯ | ಇಂದ್ರ |
ನಾರಿ ನಾ ಬಿಡು ಕೆಟ್ಟ ನಡೆಯ || 106 ||

**ಪಾಡಿ ಕುರಂಗ – ಝಂಪೆ | ಕಾಪಿ - ಅಷ್ಟ (ಸಮೀಕೃತ - ಎರಡೂ ಛಂದಸ್ಸಿಗೆ ಸರಿಹೊಂದುವ ರಚನೆ)**
ಲೇಸಾಯ್ತು ಸುರಪನರ್ಧಾಂಗಿ | ಎನ್ನ |
ಕೈಸೇರುವಾ ಭಾಗ್ಯ ಬಂತು ಶುಭ್ರಾಂಗಿ ||
ವಾಸವಾಸೆಯನು ಕೈ ಬಿಡುತ | ನೀನು |
ತೋಷಮಂಗೊಳಿಸಲ್ಕೆ ಇಂದ್ರಾಣಿ ಸತತ || 107 ||

**ಕುರುಂಜಿ - ಝಂಪೆ**
ಧರಣೀಶ ಧರ್ಮಾತ್ಮನೆನಿಸಿ | ರಾಜ |
ವರನಾದೆ ಸುರರೊಡೆಯ ಸಹಸಿ ||
ಪರಿಪಾಲಿಸಯ್ಯ ಧರ್ಮವನು | ಇಂದ್ರ |
ನರಸಿ ಹದಿಬದೆ ತಿಳಿಯೊ ನೀನು || 108 ||

**ಪಾಡಿ ಕುರಂಗ - ಝಂಪೆ**
ಇಂದ್ರಾಣಿ ನಾನಿಂದ್ರನೀಗ | ಸರ್ವ |
ವೃಂದಾರಕೇಶ್ವರ ಪೂರ್ಣತ್ವವಾಗ ||
ಹೊಂದಿ ಬಂದಧಿಕಾರದಿಂದ | ಪೇಳ್ವೆ |
ಬಂದೆನ್ನನೋಲೈಸುವುದು ಧರ್ಮದಂದ || 109 ||

**ಕುರುಂಜಿ - ಝಂಪೆ**
ಚಂದ್ರಾನ್ವಯದೊಳುದಿಸಿ ಬಂದು | ಧರ್ಮ |
ದಿಂದಾಳುತೇರಿದೆಯ ಸಗ್ಗಸಿರಿಗಿಂದು ||
ಇಂದ್ರಾಣಿ ಪದನಾಮವಲ್ಲ | ಲೋಕ |
ವಂದ್ಯನೆಂದೆನಿಸು ನೀ ದುಷ್ಕಾರ್ಯ ಹೊಲ್ಲ || 110 ||

**ಭಾಮಿನಿ**
ನಿನ್ನ ನಾ ಬಯಸಿದೆನು ತಪ್ಪಲು |
ಮನ್ನಿಸುವನಲ್ಲರಿತುಕೋ ದಿನ |
ವನ್ನು ನೀಡುವೆ ಕೆಲವ ಬಳಿಕಾಂ ಬಿಡುವನಲ್ಲರಿತು ||
ಮನ್ನಣೆಯ ನೀಡಬಲೆ ದುಡುಕುವು |
ದೆನ್ನ ಗುಣವಲ್ಲರಿತು ಪೇಳಿಹೆ |
ನೆನ್ನುತಲಿ ಗಡಬಡಿಸಿ ನಡೆದನು ನೃಪತಿ ಕೋಪದಲಿ || 111 ||

**ಕಂದ**
ಬಂದಳು ಗುರುಗೃಹಕಾಕೆಯು |
ಕುಂದಿದ ಮನದಿಂದಲೆಲ್ಲವನರುಹೆ ಕೇಳ್ದುಂ ||
ಬಂದವಗಡಕೇಂ ಗಯ್ಯುವು |
ದೆಂದಗ್ನಿ ಮರುತರ ಕರೆಸಿ ಗುಪಿತದೊಳೆಂದಂ || 112 ||

**ಕೇದಾರಗೌಳ - ಝಂಪೆ**
ಕೇಳಿದಿರೆ ನೀವಿದೆಲ್ಲ | ನೃಪನಿಂತು |
ಹಾಳಾದ ಪದವಿ ಸಲ್ಲ ||
ವೇಳೆಗಳೆದರೆ ಕೆಡುವುದು | ಮೂಲೋಕ |
ದೇಳಿಗೆಯು ನಾಶವಹುದು || 113 ||
ಗುರುವೆ ಮುಂದೇನುಪಾಯ | ದುಷ್ಟನೀ |
ದೊರೆಯ ತಂದಿಹುದಪಾಯ ||
ಮರುತಾಗ್ನಿಗಳಿಗೆಟುಕದ | ಇಂದ್ರನೆಲೆ |
ಅರಿಯೆವಾವ್ ಶಂಕಾಸ್ಪದ || 114 ||

**ಕೇದಾರಗೌಳ - ಅಷ್ಟ**
ಮದವೇರಿತರಸಗೆ ಮೊದಲಿಂದ್ರನಿಹನೆಲ್ಲೆಂ |
ಬುದನೀಗಲರಿಯಬೇಕು ||
ಸುದತಿಯೆ ನೀನುಪಶ್ರುತಿಯ ಮೆಚ್ಚಿಸು ಧ್ಯಾನ |
ಕೊದಗಿ ತೋರ್ವಳು ಪತಿಯ || 115 ||

**ಭಾಮಿನಿ**
ನಿಂದಳೊಂದೇ ಮನದಿ ದೇವಿಯೆ |
ಕಂದಳನು ಕಾಪಾಡು ತಾಯೆ ಪು |
ರಂದರನ ತೋರವ್ವ ಬಳಲಿದೆ ಮಾತೆ ರಕ್ಷಿಪುದು ||
ಹೊಂದಿದೆನು ದುರ್ವಿಧಿಯ ದೇವಿ ಸು |
ನಂದೆ ವೃಂದಾರಕರ ಕಾಪಿಡು |
ವಂದವನು ನೀ ಬಲ್ಲೆ ಶರಣಾಗತೆಗೆ ದಯೆದೋರು || 116 ||

**ಶಂಕರಾಭರಣ - ರೂಪಕ**
ಒಲಿದು ಬಂದಳವಳ ಕರೆಗೆ |
ಒಲವಿನಿಂದಲಭಯದೋರಿ |
ಸುಲಲಿತಾಂಗಿ ಭಕ್ತಿಯಿಂದ | ಸೆಳೆಯೆ ಮೆಚ್ಚಿದೆ ||
ಅಳುಕು ಬೇಡ ಬಂದುದೇನು |
ತಿಳುಹು ಸುರಪನರಸಿ ನೀನು |
ನೆಲೆಯು ಸ್ವರ್ಗ ಬಳಲಬೇಡ | ಸಲಿಪೆನಿಷ್ಟವ || 117 ||
ಅಮ್ಮ ರಮಣನೆಮ್ಮೊಳಿಲ್ಲ |
ಹಮ್ಮುದೋರುತಿಹನು ನಹುಷ |
ಸುಮ್ಮನಿರಲು ಬಾರದಿದುವೆ | ನಮ್ಮ ಕಷ್ಟವು ||
ಒಮ್ಮೆ ರಮಣನಿರವ ತೋರಿ |
ನೆಮ್ಮದಿಯನು ನೀಡು ತಾಯೆ |
ರಮ್ಯ ಪುಣ್ಯ ಧಾಮ ಕೆಡಲು | ನಿಮ್ಮ ಕರೆದೆನು || 118 ||
ಚಿಂತೆ ಬೇಡವೆನ್ನುತವಳ |
ಸಂತವಿಸುತ ದೇವಿ ಸೂಕ್ಷ್ಮ |
ವಂ ತಳೆಯುತ ಲೋಕ ಲೋಕ | ವಂತರಿಸುತಲಿ ||
ಕಂತುಪಿತನ ಧ್ಯಾನದೊಳಗೆ |
ನಿಂತು ನಾಳದಲ್ಲಿ ಸುರರ |
ಕಾಂತನಿರಲು ತೋರ್ದಳಾ ಮ | ಹಾಂತ ದೇವಿಯು || 119 ||

**ಕೇದಾರಗೌಳ - ಝಂಪೆ**
ಪತಿಯೆ ನಿನ್ನೀ ರೀತಿಯ | ಅರಿಯೆ ನಾ |
ನತಿ ಕಷ್ಟ ಸಹಿಪುದೆರೆಯ ||
ಹಿತವೆ ನೀನಿಂತಡಗಲು | ಲೋಕ ಸ |
ತ್ಕೃತಿಹೀನವಾಯ್ತು ಕೇಳು || 120 ||
ಎಂತು ನೀ ಬಂದೆ ಶಚಿಯೆ | ವೃತ್ರಹತಿ |
ಗಿಂತಾಯ್ತು ದೈವ ಗತಿಯೆ ||
ಎಂತಿಹುದು ದಿವಿಜ ಲೋಕ | ಸುರರೆಲ್ಲ |
ಸಂತವಿಟ್ಟಿಹರೆ ನಾಕ || 121 ||

**ನೀಲಾಂಬರಿ - ರೂಪಕ**
ಏನೆನ್ನಲಿ ನೀನಿಲ್ಲದೆ | ಗ್ಲಾನಿಗೊಳಲು ಸುರಲೋಕವು |
ಮಾನವಪತಿ ನಹುಷನ ತಂ | ದಾನಾಕದೊಳಿರಿಸೆ ||
ಮಾನವನೆಣಿಸದೆ ನೀತಿಯ | ನೇನೆಂಬೆನು ನಾನವನಿಗೆ |
ಮಾನಿನಿಯಾಗಲು ಬೇಕೆಂದಾಣತಿಗೈದಿಹನು ||122||

**ಸೌರಾಷ್ಟ್ರ - ತ್ರಿವುಡೆ**
ಬರುವೆ ಶೀಘ್ರದಿ ಗುರುಗಳಿಂ ಮುಂ |
ಬರಿವ ತಂತ್ರವನರಿತುಕೋ ನಿನ |
ಗೊರೆವರವರತಿ ಸೂಕ್ಷ್ಮ ಬುದ್ಧಿಯ | ಪೊರೆವರವರು||123 ||

**ದ್ವಿಪದಿ**
ಪಿಂತಿರುಗಿಸಿದಳವಳ ದೇವಿ ಸ್ವರ್ಗಕ್ಕೆ |
ಮುಂತೆ ಸುಖವಹುದೆಂದದೃಶ್ಯಳಾಗಲ್ಕೆ || 124 ||
ವರುಣಗೆಂದಳು ನಹುಷ ಬರುವಂತೆ ಮಾಡು |
ಒರೆಯಲೊಂದುಂಟೆಂದು ಗುಪಿತದೊಳಗಾಡು || 125 ||

**ಮಧುಮಾಧವಿ - ಏಕ**
ವರುಣನೈತರುತಿರೆ ಪೇಳಿದ ನಹುಷ |
ಸುರಲೋಕವೆನ್ನಿಂದ ಪಡೆದುದು ಹರುಷ ||
ದೊರೆತುದಿಲ್ಲಾದರೆ ಪೂರ್ಣತ್ವದೆರಕ |
ಕೊರತೆಯ ನೀಗಿಸದಿರಲೆಂತು ನಾಕ || 126 ||
ಇಂದ್ರಾಣಿ ಜೊತೆಗೊಳಲಿಂದ್ರತ್ವ ಪೂರ್ಣ |
ಸಂದೇಹವಿಲ್ಲವಲ್ಲವೆ ಪೇಳು ವರುಣ ||
ಸುಂದರಾಂಗಿಯ ಕಂಡು ಪೇಳ್ದೀನೀ ಮಾತ |
ಹೊಂದಲಾಕೆಯನಪ್ಪೆ ಸಂತೃಪ್ತ ಖ್ಯಾತ || 127 ||

**ಶಂಕರಾಭರಣ - ಏಕ**
ಶುಚಿಯೊ ರುಚಿಯೊ ತಿಳಿಯೆ ನಾನು |
ಶಚಿಯು ನಿನ್ನ ಕಾಣಬೇಕೆಂ |
ದ್ವಚಿಸೆ ಪೇಳಲೆಂದು ಬಂದೆ | ನುಚಿತ ಯೋಚಿಸು || 128 ||

ಭಳಿರೆ ವರುಣ ಬಲು ಹಸಾದ |
ನೆಲೆಗೆ ಬಂತು ನನ್ನ ವಾದ |
ನಳಿನನೇತ್ರೆ ಮೆಚ್ಚಿ ಮೂ - | ರಿಳೆಯ ಗೆದ್ದನು || 129 ||
ದುಡುಕಬೇಡ ನಿನ್ನೊಳೇನೋ |
ನುಡಿವ ಕಾರ್ಯವಿರುವುದೆಂದ |
ಳೊಡನೆ ಕೇಳಿ ಬಳಿಕ ನಿನ್ನ | ನಡೆಯ ಚಿಂತಿಸು || 130 ||
ಮೆಚ್ಚದಿರಲು ಸಾಧ್ಯವೇನೋ |
ಹುಚ್ಚು ಪತಿಯನದಕೆ ಶಚಿಯು |
ಹಚ್ಚಿಕೊಂಡಳೆನ್ನನಿಂದು | ನಿಚ್ಚ ವರುಣನೆ || 131 ||

***(ಶಚಿಯನ್ನು ಕಾಣಲು ನಿರ್ಗಮನ)***

**ಜಂಜೂಟಿ - ಅಷ್ಟ**
ಭಾಮೆ ಸುನಾಮೆ ಮೋಹನ್ನೆ | ಕೇಳಿ |
ನಾ ಮುದವಾಂತೆನೆ ರನ್ನೆ ||
ಕೋಮಲೆ ನೀನೆನ್ನ ಕಾಮಿಸಿ ವರಿಸಲು |
ಪ್ರೇಮಮಂದಿರವಹುದು ಸ್ವರ್ಗ ಸು |
ಧಾಮವಾಯಿತು ಕಾಮಿನೀಮಣಿ || 132 ||
ನಿನ್ನಿಚ್ಛೆಯರಿತೆ ನಾ ನಹುಷ | ಆಸೆ |
ಎನ್ನದೊಂದಿದೆ ಬೇರೆ ಹರುಷ ||
ಮುನ್ನಾರಿಂದಾಗದುದನ್ನು ನೀ ಬಯಸಿದೆ |
ಸನ್ನುತನೆ ಕೇಳಿನ್ನು ಸಾರ್ಥಕ |
ವನ್ನು ಪಡುವೆನು ನಡೆಸಿಕೊಡುವೆಯ || 133 ||
ಧರೆಯನಾಳಿದ ಭೂಪರೊಳಗೆ | ಸ್ವರ್ಗ |
ಕರಸರಾದರೆ ಶೌರ್ಯದೊಳಗೆ ||
ಸರಿಯಾರು ಮೂಲೋಕವಿರುವುದೆನ್ನಾಧೀನ |
ವರುಹು ನಿನ್ನಾಸೆಯನು ತೀರ್ಚುತ |
ವರಿಸುವೆನು ವೈಭವದಿ ಪೇಳ್ ಪೇಳ್ || 134 ||

**ಸಾಂಗತ್ಯ - ರೂಪಕ**
ಬರುತಿರ್ದನಿಂದ್ರನು ತುರಗ ಉಚ್ಚೈಶ್ರವ |
ಕರಿಯೈರಾವತವನೇರುತ್ತ ||
ವರ ವೈಮಾನಿಕರುಂಟು ರಥವೇರಿ ಬಹರುಂಟು |
ಪಿರಿದೇನುಂಟೀ ಯಾನಗಳಿಗೆ || 135 ||
ಋಷಿಯಾನದಲಿ ನೀನು ಬರಲು ಸಂಭ್ರಮದಿಂದ |
ಪೊಸತನದಿಂದ ಶೋಭಿಪುದು ||
ರಸೆ ಪದಿನಾಲ್ಕರೊಳಾರಿಲ್ಲದಂಥಾ ಸಾ |
ಹಸ ಯಾನದೊಳು ಬಾರೈ ನೃಪತಿ || 136 ||
ಲೇಸಾಯ್ತು ಶಚಿರಾಣಿ ನೀ ಪೇಳ್ದ ಮಾತಿದು |
ನಾ ಸಾಮಾನ್ಯನೆ ನೋಡು ನಾಳೆ ||
ತೋಷದಿಂದೈತಹೆ ಸಪ್ತರ್ಷಿಯಾನದೊ |
ಳಾಸೆಯ ಕೈಗೂಡಿಸುವೆನು || 137 ||

***(ನಿರ್ಗಮನ)***

**ವಾರ್ಧಕ**
ಗರುವವೇರಿರುವರಸನರಿಯದಾದಂ ಲೋಕ |
ವಿರುವುದೀ ಮಹಿಮರ ತಪಸ್ಸಿದ್ಧಿಯೊಳಗೆಂದು |
ಗುರು ಬೃಹಸ್ಪತಿಗೊರೆದು ಕರೆಸಿದಂ ಸಪ್ತರ್ಷಿಗಳನೆಲ್ಲವೇನೆಂಬೆನು ||
ಪಿರಿಯಂ ಮರೀಚಿ ಮತ್ತತ್ರಿಯಂಗೀರಸಂ |
ವರ ಪುಲಸ್ತ್ಯಂ ಪುಲಹ ಕ್ರತುವಗಸ್ತ್ಯರುಗಳೈ |
ತರಲವರ ಪೂಜಿಸದಹಂಕಾರದಿಂ ಪೇಳ್ದನಾಣತಿಯ ಧ್ವನಿಯೊಳವನು || 138 ||

**ಸೌರಾಷ್ಟ್ರ - ತ್ರಿವುಡೆ**
ಹೊತ್ತುಕೊಂಡೊಯ್ಯುವುದು ಮೇನೆಯ |
ನೆತ್ತಿ ಪೆಗಲೊಳು ಶಚಿಯ ಗೃಹಕೀ |
ಹೊತ್ತಿನೊಳಗೆನಲೊತ್ತಿ ಕೋಪವ | ನೆತ್ತಿ ನಡೆಯೆ || 139 ||
ಆಳು ಭೇದಗಳುಳ್ಳ ಋಷಿಗಳ |
ಮೇಳ ಯಾನಕ್ಕಡ್ಡಿಯಾಯಿತು |
ತಾಳಮೇಳವು ತಪ್ಪೆ ಮೇನೆಯು | ತಾಳದಾದ || 140 ||
ತೋರ್ಪರಿಂಗತಿ ಕುಬ್ಜನಾಗಿರು |
ತಿರ್ಪಗಸ್ತ್ಯನ ಗತಿಗೆ ಕೆರಳುತ |
ದರ್ಪದಿಂದೊದೆಯುತ್ತ ಪೇಳಿದ | ಸರ್ಪ ಸರ್ಪ || 141 ||

**ಮಾರವಿ - ಏಕ**
ಎತ್ತಿ ಬಿಸಾಡಿದ ಪೊತ್ತಿಹ ಮೇನೆಯ |
ತತ್ತರಿಸುತಲವನು ||
ಮತ್ತುರುಳಲು ತಾ ತೊತ್ತಳದುಳಿಯುತ |
ಲಿತ್ತನು ಶಾಪವನು || 142 ||
ತಪ್ಪರು ತಪದಿಂ ಸಪ್ತ ಋಷಿಗಳ್ ವಿ |
ಕ್ಷಿಪ್ತನೆ ಕಾಮುಕನೆ ||
ತೃಪ್ತಿಗೆ ಮೇನೆಯ ಹೊತ್ತಾಳುಗಳಿಂ |
ಬೀಪ್ಸೆಯ ಲಂಪಟನೆ || 143 ||
ಉರುಳೀಕ್ಷಣ ಧರೆಗಜಗರವಾಗುತ |
ಪರಿಭವಿಸಿದ ಪಾಪ ||
ತೆರಳದು ಶತ ಸಾವಿರ ವತ್ಸರವೆಂ |
ದುರಿದಿತ್ತನು ಶಾಪ || 144 ||

**ಕೇದಾರಗೌಳ - ಅಷ್ಟ**
ಬಿದ್ದಲ್ಲಿ ಋಷಿಪಾದ ಹೊದ್ದೆ ಮೂಡಿತು ಜ್ಞಾನ |
ಕ್ಷುದ್ರ ನಾನಾದೆನಯ್ಯೋ ||
ಉದ್ಘಟತನದಿಂದ ಬಿದ್ದೆ ಪ್ರಪಾತದೊ |
ಳುದ್ಧರಿಸೈ ಮುನಿಯೆ || 145 ||
ಕೆಡೆದು ಮುನಿಯ ಪಾದದೆಡೆಯಲ್ಲಿ ದಮ್ಮಯ್ಯ |
ಕಡು ಮೂರ್ಖನಾದೆ ನಾನು ||
ನುಡಿಯಿಂದ ಮುನಿರುದ್ರ ಕಡಿಯಬೇಡೆನ್ನನು |
ಸುಡಬೇಡ ಕರುಣೆದೋರು || 146 ||

**ಭಾಮಿನಿ**
ಮೊಮ್ಮ ನೀನು ಪುರೂರವಾಖ್ಯಗೆ |
ನೆಮ್ಮಿ ಧರ್ಮದೊಳಿದ್ದೆ ಭುವಿಯಲಿ |
ಹಮ್ಮಡರಿತವಿವೇಕ ಸ್ವರ್ಗದಿ ಬಯಸಿ ಋಷಿಯಾನ ||
ಚಿಮ್ಮತೆನ್ನಿಂ ಶಾಪ ಭೂಮಿಯೊ |
ಳೊಮ್ಮೆ ಕಾಣುವೆ ಧರ್ಮಮೂರ್ತಿಯ |
ನೆಮ್ಮದಿಯು ಬಳಿಕಾತನೊಳು ಜಿಜ್ಞಾಸೆ ನಿನಗಹುದು || 147 ||
ಮತ್ತೆ ಮೋಕ್ಷವ ಪಡೆವೆ ಪೋಗೆ |
ನ್ನುತ್ತಲವರೈದಲ್ಕೆ ನರಪತಿ |
ಪೃಥ್ವಿಗುರುಳಲು ಘೋರವಾದಜಗರ ಕುರೂಪದಲಿ ||
ಹತ್ತು ಸಾವಿರ ವರ್ಷ ಕಳೆದುದು |
ಹೊತ್ತು ಜ್ಞಾನ ವಿಶಾಖಿಯೂಪವೆ |
ನುತ್ತ ಪೆಸರಾಗಿರುವರಣ್ಯದಿ ಯುಗಗಳುರುಳಿದವು || 148 ||

**ಸೌರಾಷ್ಟ್ರ - ತ್ರಿವುಡೆ**
ಗಂಡುಗಲಿಯುದ್ದಂಡ ಭೀಮನು |
ಹಿಂಡು ಶಬರರ ದಂಡ ಕೂಡಿ ಪ್ರ |
ಚಂಡ ಗೊಂಡಾರಣ್ಯ ಮೃಗಗಳ | ಹಿಂಡ ತುಡುಕಿ || 149 ||
ಬೇಟೆಯಾಡಿದನಮಮ ಗಜ ಹುಲಿ |
ಕಾಟಿ ಕಾಡ್ಕೋಣಗಳ ತುಡುಕಿದ |
ಕೂಟಗಳ ಬೊಬ್ಬಾಟವಂಬರ | ಮೀಟೆ ವನದಿ || 150 |

(ಇಲ್ಲಿ ಬೇಟೆಗಾರರಿಗೆ ಪ್ರತ್ಯೇಕ ಪದ್ಯ ಬೇಡ. ಪಾರಂಪರಿಕವಾಗಿ ಸುಂದರವಾದ ಕ್ರಮವೇ ಇದೆ. ಎಷ್ಟು ಬೇಟೆಗಾರರಿದ್ದಾರೋ ಅಷ್ಟೂ ಜನಕ್ಕೆ ಪ್ರವೇಶ, ಅದಾದ ಮೇಲೆ ಬಡಗಾದರೆ ಕೋರೆ ಮುಂಡಾಸಿನ ಕಿರಾತರ ನಾಯಕ, ತೆಂಕಾದರೆ ಕಪ್ಪು ಪಗಡಿಯ ನಾಯಕ ಹೀಗೆ ಪ್ರವೇಶ. 'ಭೀಮಸೇನರ ಕರೆ ಬಂದಿದೆ ಬೇಟೆಗೆ ಬರಬೇಕೆಂದು' ಎಂದು ಹೊರಡುವುದು. ಇದಕ್ಕೂ ಪೂರ್ವದಲ್ಲಿ ನಾಯಿ, ಬಲೆ, ಜನರನ್ನು ಲೆಕ್ಕಮಾಡುವುದು ಮುಂತಾದ ಪದ್ಧತಿಯ ಕ್ರಮವಿದೆ. ಯಾವುದಕ್ಕೂ ಪದ್ಯವಿಲ್ಲ. ಎಲ್ಲವೂ ಹಿಮ್ಮೇಳದ ನುಡಿತದಲ್ಲಿ. ನಂತರ ಭೀಮನೊಂದಿಗೆ ಸಂಭಾಷಣೆ. ಬೇಟೆಗೆ ಹೊರಟಮೇಲೆ ಮೇಲಿನ ಪದ್ಯ ಸಾಕು. ಅಜಗರದ ಪ್ರವೇಶ ಪೂರ್ವದವರೆಗೂ ಬೇಟೆ. ನಂತರ....)

**ಮಾರವಿ - ಏಕ**
ಹೊಡಕರಿಸುತ ಗುಡುಗುಡಿಸುತಲೆದ್ದುದು |
ಕಡುಕೋಪದೊಳುರಗ ||
ಅಡವಿಯ ಬೊಬ್ಬಾಟವ ನಿಲಿಸುವೆನೆಂ |
ದಡಹಾಯ್ದುದು ದಡಿಗ || 151 ||
ಬೆಟ್ಟವೆ ಚಲಿಸಿತೊ ದಟ್ಟಡವಿಯೊಳೆನೆ |
ಕುಟ್ಟಿತು ತರು ಗಿರಿಯ ||
ಸಿಟ್ಟಿನೊಳಗ್ನಿ ಜ್ವಾಲೆಯ ಕಾರಿತು |
ಸುಟ್ಟಿತು ವನಸಿರಿಯ || 152||

**ಭಾಮಿನಿ**
ಬಳಿಕ ಬಂದವನಾರು ನೋಡುವೆ |
ಬಲು ದಿನದ ಹಸಿವಿಂಗೆಯುತ್ತರ |
ಸಲುವುದಿಂದಿಗೆನುತ್ತ ಹೊಂಚುತ ಮಲಗಿ ವೀಕ್ಷಿಸುತ ||
ತಿಳಿಯದಂತವನಿರೆ ಬಕಾಂತಕ |
ಬಳಿಯ ಬೇಡರ ಕರೆದು ತೋರಿದ |
ನೆಲೆಲೆ ನೋಡಿರಿ ಭೀಕರದ ಹೆಬ್ಬಾವು ನಿದ್ರಿಸಿದೆ || 153 ||

**ಸುರುಟಿ - ಏಕ**
ಬೇಡವಿದರ ತಂಟೆ | ಸಿಕ್ಕಲು |
ಓಡಿ ಬದುಕಲುಂಟೆ ||
ಕಾಡುಕೋಣ ಹುಲಿ | ಕಾಡಾನೆಗಳಂ |
ಕೂಡೆ ನುಂಗುವುದು | ನೋಡಿದರುಳಿಯೆವು || 154 |
ಘೋರವಿದರ ಕಾರ್ಯ | ಬೆಂಕಿಯ |
ಕಾರಿ ಕೊಲುವ ಕ್ರೌರ್ಯ ||
ಭಾರಿ ವೇಗದಿಂ | ದ್ಹಾರಿ ಹಿಡಿವುದಿದು |
ಮಾರಿಯರಿವಮೊದ | ಲ್ಹಾರುವ ಬನ್ನಿರಿ || 155 ||

**ಸೌರಾಷ್ಟ್ರ - ತ್ರಿವುಡೆ**
ಹತ್ತು ಸಾವಿರ ಮತ್ತ ಗಜಗಳ |
ಸತ್ವದಳತೆಯ ವೀರ ನಾನಹೆ |
ಮೃತ್ಯುವಾದುದೆ ವನಕೆ ಮಥಿಸುವೆ | ನತ್ತ ಸಾರಿ || 156 ||
ಧಿಕ್ಕರಿಸುತವರೆಚ್ಚರಿಕೆಯನು |
ಹೊಕ್ಕನಾ ಹೆಬ್ಬಾವು ಮಲಗಿದ |
ದಿಕ್ಕಿಗಾ ಕಲಿ ಭೀಮಸೇನನು | ಸೊಕ್ಕಿನಿಂದ || 157 ||

***(ಅಜಗರದ ಮೇಲೆ ಭೀಮನ ದಾಳಿ)***

**ಭೈರವಿ - ಏಕ**
ಉರಿಸೂಸುತಲಜಗರವು | ಹೊಡ |
ಕರಿಸುತ ಸುತ್ತಿತು ಬಿಗುವು ||
ಭರಿತಬಲವನೊಗ್ಗೂಡಿ | ಸೆಳೆ |
ದರು ಬಿಡದೆತ್ತಿತು ಝೋಡಿ || 158 ||
ಬಾಹುವ ಬಂಧಿಸಲವನ | ಉ |
ತ್ಸಾಹ ಕುಸಿದುದತಿಬಲನ ||
ಸಾಹಸವಡಗಲು ನಡುಗಿ | ಬಳಿ |
ಕಾಹವಮಲ್ಲನು ಮರುಗಿ || 159 ||

**ಸೌರಾಷ್ಟ್ರ - ತ್ರಿವುಡೆ**
ನೋಡುತಿದನೆಲ್ಲವನು ತಾವ್ ಕಿ |
ತ್ತೋಡಿದರು ತ್ವರಿತದಲಿ ಧರ್ಮಜ |
ಗೂಡಿ ಬರದಿರೆ ಕೇಡೆನುತ್ತಲಿ | ಬೇಡ ಪಡೆಯು || 160 ||

**ಶಂಕರಾಭರಣ - ರೂಪಕ**
ಬೇಡರೆಂದ ಮಾತ ಮೀರಿ |
ಗಾಢ ಗರ್ವದಿಂದ ಕೆಟ್ಟೆ |
ಕಾಡ ಸರ್ಪದೊಡಲಿನುರಿಗಾ | ನೀಡೆ ಶಿವ ಶಿವ ||
ರೂಢಿಯೊಳಗತ್ಯಧಿಕ ಸತ್ವ |
ಗೂಡಿ ಮೆರೆದೆ ಧರ್ಮಕಾಗಿ |
ಕಾಡೊಳಲೆದ ಪಾಡೆ ಸಹಸ | ಕೇಡು ಬಂದುದು || 161 ||
ಹಿರಿಯನಣ್ಣ ಧರ್ಮಪುರುಷ |
ಹರಿಯ ಕರುಣ ಪೊರೆವ ಕವಚ |
ಮರುತತರಳನಿಂದ್ರುಸುತಗೆ | ಹಿರಿಯನಾಗಿಹೆ ||
ಮೆರೆವ ಚಂದ್ರಾನ್ವಯದೊಳೀ ದು |
ರ್ಮರಣಗೊಂಡೆನೆಂದರೆನ್ನ |
ಪುರುಷತನಕೆ ಸಾವು ಸರಿಯೆ | ದುರುಳರುಳಿದರೆ || 162 ||

**ಭಾಮಿನಿ**
ಇಂದುವಂಶಜನೆಂಬ ನುಡಿ ಕಿವಿ |
ಗಂದು ಸೋಕಿತು ಯುಗಗಳಂತರ |
ದಿಂದ ಕಾಯುವ ಸ್ಮರಣೆ ಸಾಯದ ನಹುಷ ಭೂಪತಿಗೆ ||
ಎಂದುದೇನೈ ಪೇಳು ಪೇಳ್ ನೀ |
ಚಂದ್ರ ವಂಶಜನೆಂತು ಹಸಿವಿಂ |
ಕುಂದಿರುವೆ ಬಹು ದಿನದಿ ತಿನ್ನುವೆ ಬಳಿಕ ಮೊದಲರುಹು || 163 ||

**ಕೇದಾರಗೌಳ - ಅಷ್ಟ**
ಆಹಾರವಾದಮೇಲೀ ಹಿಂಸೆ ಸಾಕಯ್ಯ |
ಸಾಹಸಿ ಭೀಮನೆಂದು ||
ನಾ ಹಸ್ತಿನಾವತಿಗರಸು ಪಾಂಡುಕುಮಾರ |
ನೇಹಿಗ ಶ್ರೀಕೃಷ್ಣನ || 164 ||
ಇಂದಿನರಸನಾರು ಹಿಂದಾಳಿದವರಾರೀ |
ಗೆಂದ ಹಸ್ತಿನೆ ಯಾವುದು ||
ಸಂದೇಹಗೊಂಡೆನೀ ವಂಶದುನ್ನತಿಯನಾ |
ರಿಂದ ನಾ ತಿಳಿಯಲೀಗ || 165 ||
ತಿನ್ನುವ ಖಾದ್ಯದೊಳಿನ್ನು ಧಾರಣೆ ಕೇಳ್ವೆ |
ನೆನ್ನುವುದತಿ ಚೋದ್ಯವು ||
ಎನ್ನದೇನಿದ್ದರು ಮನ್ನಣೆ ಪೌರುಷ |
ತಿನ್ನು ಬೇಡೆಂದರಾರು || 166 ||
ಕಾದುದಾದರೆ ಕೆಲಕಾಲವೆನ್ನಗ್ರಜ |
ಸಾಧಕ ಧರ್ಮಾತ್ಮನು ||
ಆದುದ ಹೋದುದ ಬರುವುದೆಲ್ಲವ ಬಲ್ಲ |
ನೀ ದಯದೋರನಕ || 167 ||
ಬಿಗಿದ ಬಾಹುವ ಬಿಟ್ಟು ಬಂಧದೊಳಿರಿಸುತ |
ಲೊದಗಿತು ಕಾಲವೆಂದು ||
ಮೊದಲಗಸ್ತ್ಯನು ಪೇಳ್ದ ಮಾತ ಸಂಸ್ಮರಿಸುತ್ತ |
ಮುದಗೊಂಡನಜಗರನು || 168 ||

**ವಾರ್ಧಕ**
ಕಳೆದು ನರನಾರಾಯಣಾಶ್ರಮವ ಪಾಂಡವರು |
ಬಳಿಕ ಯಮುನೋತ್ರಿಯಂ ದರ್ಶಿಸುತ ಮುಂದೈದಿ |
ನೆಲಮುಗಿಲನೊಂದುಗೈವತಿ ವೃಕ್ಷ ರಾಜಿಯಿಂದಿಹ ವಿಶಾಖಾಯೂಪದಿ ||
ನೆಲೆಯಾಗಿ ಕೆಲಕಾಲ ಕಳೆದಿರಲ್ಕಾದಿನಂ |
ಕಲಿಭೀಮ ಕಾಣದಿರೆ ವಿಹ್ವಲಂ ಧರ್ಮಜಂ |
ಕಳವಳಂಗೊಳ್ಳುತಾತಂಕ ಮಿಗೆ ವ್ಯಾಧರೈತಂದು ಬಿನ್ನಹ ಗೈದರು || 169 ||

**ಮುಖಾರಿ - ಏಕ**
ಕೇಳೋ ಧರ್ಮಪ್ಪ ನಮ್ಮ ಮಾತ | ಮೃಗ ಬೇಟೆಗೆಂದು |
ಪೇಳದೆ ಭೀಮಪ್ಪ ನಮ್ಮ ಸಹಿತ ||
ಹಾಳು ಕಾಡೊಳೆಮ್ಮಾಳುಗಳೊಡುತ |
ಕಾಳು ಮೃಗಾಳಿಯ ಸೀಳುತಲೈದೆವು || ಕೇಳೋ || 170 ||
ಬೆಟ್ಟದಂತೈತೆ ಹೆಬ್ಬಾವು | ಬರಲದರ ಕಂಡು |
ಕೆಟ್ಟೆವು ಬೇಡ ಬೇಡೆಂದರಾವು ||
ದಿಟ್ಟತನದಿ ಮುಂದಿಟ್ಟ ಹೆಜ್ಜೆಯಿಂ |
ಕಟ್ಟಿತುರಗ ಗುಡುಗುಟ್ಟಿಸಿತೊಯ್ಯನೆ || ಕೇಳೋ || 171 ||

**ಮಧುಮಾಧವಿ - ತ್ರಿವುಡೆ**
ಕೇಳಿ ವಿಸ್ಮಿತನಾದ ಬಲುಬಲ |
ದಾಳು ಭೀಮನ ಪಿಡಿದುದುರಗವು |
ಕಾಲಕೆಟ್ಟುದೆನುತ್ತ ಧೌಮ್ಯರ |
ಮೇಳಗೊಂಡಾ ನರಪತಿ || 172 ||

**ಮಧುಮಾಧವಿ - ಏಕ**
ಬಿಗಿದ ಭೀಮನ ಕಂಡು ನೃಪತಿ ಚಿಂತೆಯಲಿ |
ಜಗದೇಕ ಬಲನಿಗಿಂತಾದಾತಂಕದಲಿ ||
ದೃಗುದುಂಬಿ ಸತ್ಯ ಧರ್ಮಕೆ ಚಿಂತೆ ಬಂತೆ |
ನಗಧರ ನಿನ್ನ ನಂಬಿದೆ ಕಾಯೊ ಮುಂತೆ || 173 ||
ಆರಯ್ಯ ನೀನು ನಾನೋರ್ವನ ಪಿಡಿದೆ |
ಆರೋ ಬರುವರೆಂದನದಕಾಗಿ ತಡೆದೆ ||
ಕ್ರೂರಿ ನಾ ಹಸಿದಿಹೆ ದೂರ ಪೋಗಯ್ಯ |
ಈ ರೀತಿ ಬಳಿ ಸಾರೆ ನಾಳೆಗಾಗುವೆಯ || 174 ||

ಮನುಜನ ಮಾತಿದು ತನುವಜಗರವು |
ಅನುಜನೀತನು ವಾಯುಸುತ ಚಂದ್ರಾನ್ವಯವು ||
ಘನ ಸರ್ಪರಾಜ ಕೇಳ್ ನಿನಗೇನು ಕೊಡಲಿ |
ಎನಗಿವನಿಲ್ಲದಾಗದು ಕೇಳು ಬದಲಿ || 175 ||
ಆರನೆ ಯಾಮದಿ ಪಿಡಿದುದ ಬಿಡೆನು |
ಆರೆಂದೆ ಚಂದ್ರನನ್ವಯವೀಗಿಹುದನು ||
ಪೂರುವದೊಳಗಾರು ನಿನ್ನವರರುಹು |
ವೀರ ವರರ ವಂಶಕೇನಂಥ ಕುರುಹು || 176 ||

**ಸುರಟಿ - ಏಕ**

ಸುದ್ಯುಮ್ನನು ಮನುಗೆ | ಸುತ ಶಾ |
ಪೋದ್ಯಾನದ ನೆಲೆಗೆ ||
ಹೊದ್ದಲು ಹೆಣ್ಣಾ | ಗಿದ್ದನು ಬುಧನಿಂ |
ದುದ್ಭವನಾದ ಪುರೂರವನೆಂಬನು || 177 ||
ಭೂಪತಿ ನಹುಷನನು | ಬಲ್ಲೆನು |
ನೀ ಪೇಳುಳಿದರನು ||
ಆಪಾಂತದ ಧರಣೀಪತಿಗಳದಾರ್ |
ಈ ಪರಿ ವನದೊಳಗೇಂ ಪರಿತಾಪವು || 178 ||

**ವಾರ್ಧಕ**

ರಾಜರ್ಷಿವರ ಯಯಾತಿಯ ಸುತಂ ಪುರು ಮುಂದಿ |
ನೋಜೆಯೊಳ್ ಸಮ್ರಾಟರೊಳಗೋರ್ವ ಭರತ ನೃಪ |
ನೈಜ ಧರ್ಮವ ಬಿತ್ತಿ ಬೆಳೆದ ಕುರು ಸಂವರಣನಜಮೀಢ ಮೊದಲಾಗಿಹ ||
ರಾಜ ಯೋಗಿಗಳಾಗಿ ಮೆರೆದರೊಳ್ ಶಂತ ನೃಪ |
ನೀಜಗದೊಳಾಚಾರ್ಯ ಭೀಷ್ಮ ಪಾಂಡು ಮಹೀಶ |
ರೈ ಜನಿಸಿದೆವು ನಾವು ಪಾಂಡವರು ಕೌರವರು ವನವಾಸವಾಯ್ತು ವಿಧಿಯಿಂ || 179 ||

**ಶಂಕರಾಭರಣ - ಏಕ**

ಯಮ ಸಮೀರನಿಂದ್ರ ಮತ್ತಾ |
ಯಮಳರಶ್ವಿನೇಯರೊಲಿದು |
ಕ್ರಮದೊಳಾವು ಜನಿಸಿ ಲೋಕ | ಕ್ರಮಿಸುತೀರ್ಪೆವು || 180 ||
ಧರ್ಮ ಸೂಕ್ಷ್ಮದೊಲವ ಕೇಳ್ವ |
ನಿರ್ಮಲದಲಿ ಪೇಳೆ ನಿನ್ನ |
ತಮ್ಮನನ್ನು ಬಿಡುವೆ ಪೇಳು | ಸಮ್ಮತಿಸುವೆಯ || 181 |

**ಆರ್ಯ ಸವಾಯಿ - ಏಕ**

ಕೇಳು ಯಥಾಮತಿ ಪೇಳುವೆನುತ್ತರ |
ಆಳಲ್ಲವು ನಾವೆಲ್ಲದಕು ||
ಆಲಿಪ ಜ್ಞಾನಕ್ಕಿದೆ ಮಾನುಷ ಮಿತಿ |
ಕಾಲವು ದೇಶವದಿರಬೇಕು || 182 ||

**ಕೇದಾರಗೌಳ - ಅಷ್ಟ**

ಏನಯ್ಯ ಧರ್ಮವೆಂದರೆ ವ್ಯಾಖ್ಯೆ ಭೂಪಾಲ |
ಮಾನವನೆಂಬನಾರು ||
ಸಾನುರಾಗದಿ ಪೇಳು ಸಂತೋಷಕಿಹ ಮೂಲ |
ದಾನದೊಳ್ ಪಿರಿದಾವುದು || 183 ||

**ಸಾಂಗತ್ಯ - ರೂಪಕ**

ಕಾಕೋದರನೆ ಲೋಕ ಕಲ್ಯಾಣವೇ ಧರ್ಮ |
ಬೇಕೆಲ್ಲ ಮಾನವೀಯತೆಯು ||
ಸಾಕಾರ ನಿಸ್ವಾರ್ಥ ತ್ಯಾಗ ತೋಷದ ಮೂಲ |
ಬೇಕನ್ನ ವಿದ್ಯಾ ದಾನಗಳು || 184 |

**ಕೇದಾರಗೌಳ - ಅಷ್ಟ**

ಮಾನವ ಜನ್ಮದ ಮೊದಲಾದ್ಯತೆಗಳೇನು |
ಮಾನ ನಿಧಿಯೆ ಪೇಳಯ್ಯ ||
ಹೀನಗುಣಂಗಳಾವುದನೆಲ್ಲ ಬಿಡಬೇಕು |
ಜ್ಞಾನ ನೀನರಿತು ಪೇಳು || 185 ||

**ಸಾಂಗತ್ಯ - ರೂಪಕ**
ಆಯುರಾರೋಗ್ಯವು ಜ್ಞಾನ ಸ್ಥಾನಾಪನ್ನ |
ರಯಿದನೆಯದೆ ಸದಾಚಾರ ||
ಹೇಯ ಗುಣಂಗಳು ಮದಹಂಕಾರಗಳಯ್ಯ |
ಕಾಯವ ಕ್ಲೇಶಕಿಕ್ಕುವುದು || 186 ||

**ಮಧುಮಾಧವಿ - ಏಕ**
ಶಾಂತಿಯ ಮೂಲ ಮಂತ್ರವ ಪೇಳು ಭೂಪ |
ಶಾಂತಮನನೆ ಭಾರವಾವುದೆಂತಪ್ಪ ||
ನೀಂ ತಿಳುಹಾವುದೆಮಗೆ ಶತ್ರು ಮಿತ್ರ |
ಭ್ರಾಂತನಾರೆಂದು ಪೇಳ್ವುದು ಧರ್ಮಪುತ್ರ || 187 ||
ಸುಖ ದುಃಖ ಸಮಭಾವ  ಶಾಂತಿಯು ಸರ್ಪ |
ಸಕಲಕೂ ಭಾರ ದೋಷೀ ಭಾವ ದರ್ಪ ||
ವಿಕಲ ಸ್ವಾರ್ಥವೆ ಶತ್ರುವರ್ಪಣೆ ಮಿತ್ರ |
ಅಕಟ ಚಿರಂಜೀವಿಭ್ರುಮೆಯು ಸರ್ವತ್ರ || 188 ||

**ನವರೋಜು - ಏಕ**
ಮೆಚ್ಚಿದೆನ್ನೈ ಯಮಸೂನು |  ಸ |
ವ್ರೋಚ್ಚನು ಪೇಳುವುದೇನು ||
ಬಿಚ್ಚಿದೆ ನಿನ್ನನುಜನ ಸೆರೆ ಭೂಪತಿ |
ಸಚ್ಚರಿತನೆ ನಾ ಪಡೆದೆನು ಸದ್ಗತಿ || 189 ||
ಧರ್ಮದೊಳಾಳಿದೆ ಧರೆಯ |  ಸ |
ತ್ಕರ್ಮದಿ ಸೇರಿದೆ ದಿವಿಯ ||
ದುರ್ಮತಿಯಾಗುತಗಸ್ತ್ಯನ ಶಾಪದೊ |
ಳುರ್ವಿಗುರುಳಿ ಸವೆಸಿದೆ ಮತ್ಕರ್ಮವ  || 190 ||
ಕಳಚಿತು ಶಾಪವು ತನಯ |  ನೀ |
ಬೆಳಗುವೆಯ್ಯೈ ಪಡೆ ಜಯವ ||
ಕುಲಕಾಯ್ತುನ್ನತಿ ನಿನ್ನುದ್ಭವದಿಂ |
ದಿಳೆ ಧರ್ಮದಿ ನಿಲೆ ಸಲಹೈ ಧರೆಯನು || 191 ||

**ವಾರ್ಧಕ**
ನೋಡ ನೋಡುತ್ತಿರಲ್ಕಜಗರ ಶರೀರಮೀ |
ಡಾಡಿದುದು ತಲೆವಾಗಿ ಧರ್ಮಸುತ ವಂದಿಸಲ್ |
ರೂಢಿಪತಿ ದಿವ್ಯತ್ವಮಂ ತಳೆದು ತೆರಳಿದಂ ಮೋಕ್ಷಧಾಮವ ಸೇರಲು ||
ಬೇಡ ಪಡೆ ಬೆರಗುಗೊಳಲೆಚ್ಚರಂಗೊಳೆ ಭೀಮ |
ಕಾಡಿನೊಳಗಡಸಿರುವ ಸಂಕಟಕೆ ನಾಚಿದಂ |
ಕೂಡಿಕೊಂಡವರ ನೃಪ ಬಿಡದಿಗೈತಂದ ಸಂತಸಗೊಳಲ್ ಸಕಲರಾಗ || 192 ||

**ಸಾಂಗತ್ಯ - ರೂಪಕ**
ಅಜ್ಞಾನ ತಿಮಿರವ ತೊಳೆದು ಸತ್ಕೃತಿಗಳಿಂ  |
ಸುಜ್ಞಾನ ಬೆಳಗಿ ಲೋಕದಲಿ ||
ವಿಜ್ಞಾನದಿಂದಿಳೆ  ತಂಪಾಗೆ ಪೊರೆವ ಸ |
ರ್ವಜ್ಞನಿಂಗೊರೆವೆ ಮಂಗಲವ || 193 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಗೊತ್ತಿಲ್ಲ

**ಪ್ರಸಂಗ ಪ್ರತಿ ಆಧಾರ:** ಕವಿಯ ಮೂಲ ಕೃತಿ

**ಪ್ರಸಂಗ ಪ್ರತಿ ಕೊಟ್ಟವರು:** ಆರ್. ಆರ್. ಪಾಂಗಳ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಕೃಷ್ಣ ಪ್ರಸಾದ್

**ಅಂತರಜಾಲ ಪ್ರತಿ ಬರವಣಿಗೆ:** ಕೃಷ್ಣ ಪ್ರಸಾದ್

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ